Digitized by Arya Samaj Foundation Chennai and eGangotri

ತಾಡವಾಲೆ ಗ್ರಂಥಸೂಚಿ

ಸಂಪಾದಕ

ಪ್ರೊ. ಎಂ. ರಾಜಗೋಪಾಲಾಚಾರ್ಯ



ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ

ಎಂ. ಜಿ. ಎಂ. ಕಾಲೇಜು, ಉಡುಪಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri 8285

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

DONATION

ತಾಡವಾಲೆ ಗ್ರಂಥಸೂಚಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತಾಡವಾಲೆ ಗ್ರಂಥಸೂಚಿ

DONATION

ಸಂಪಾದಕ

ಪ್ರೊ. ಎಂ. ರಾಜಗೋಪಾಲಾಚಾರ್ಯ

ನಿವೃತ್ತ ಕನ್ನಡ ಪ್ರಾಧ್ಯಾಪಕ ಮತ್ತು ಸಂಶೋಧಕ

"FORWARDED FREE OF COST, AND WITH THE COMPLEMENTS OF THE DEPARTMENT OF EDUCATION, GOVERNMENT OF INDIA, NEW DELHI"

ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ

ಎಂ. ಜಿ. ಎಂ. ಕಾಲೇಜು, ಉಡುಪಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

TĀḌAVĀLE GRANTHASŪCI (Annotated Catalogue of Palm-Leaf Manuscripts)—Edited by Professor M. Rajagopalacharya, Retired Professor of Kannada and Researcher. Published with the Financial Assistance of University Grants Commission, New Delhi, by Rashtrakavi Govind Pai Samshodhana Kendra, M. G. M. College, Udupi 576 102 (Udupi, D. K.). First Published 1991.

ಪ್ರಥಮ ಮುದ್ರಣ 1991
ಕಾಪಿರೈಟ್ © ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ

ಮುದ್ರಕರು
ಶ್ರೀ ಶಕ್ತಿ ಎಲೆಕ್ಟ್ರಿಕ್ ಪ್ರೆಸ್, ಜಯನಗರ, ಮೈಸೂರು ೧೪

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಕಾಶಕರ ಮಾತು

ಒಂದು ಪ್ರದೇಶದ ಜನಾಂಗೀಯ, ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಅಧ್ಯಯನದ ಸಂದರ್ಭದಲ್ಲಿ ಪ್ರಾಚೀನ ಅವಶೇಷಗಳ ವಸ್ತುಸಂಗ್ರಹಾಲಯ ಹಾಗೂ ಹಸ್ತಪ್ರತಿಗಳ ಗ್ರಂಥಾಲಯ ಅತಿ ಮಹತ್ವದ ಪಾತ್ರ ವಹಿಸುತ್ತವೆ. ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರದಲ್ಲಿ ಕರಾವಳಿ ಕರ್ನಾಟಕದ ಪ್ರಾದೇಶಿಕ ಅಧ್ಯಯನದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಾಗ ಇಲ್ಲಿನ ಹಳ್ಳಿಗಳಲ್ಲಿ ದೊರೆತ ಪ್ರಾಚೀನ ಶಿಲಾಕೃತಿಗಳ, ಶಿಲಾಲೇಖಗಳ ಹಾಗೂ ತಾಡವಾಲೆಗಳ ಸಂಗ್ರಹವನ್ನು ಮಾಡುವ ಸಂದರ್ಭ ಒದಗಿ ಬಂತು. ಇದು ನಮ್ಮ ಸಂಶೋಧನ ಕಾರ್ಯಗಳಿಗೆ ಪೂರಕವಾಗುವುದು ಮಾತ್ರವಲ್ಲ, ಹೊರ ಪ್ರದೇಶಗಳಿಂದ ಬರುವ ಜಿಜ್ಞಾಸುಗಳಾದ ಸಂಶೋಧಕರಿಗೂ ಉಪಯುಕ್ತ ಮಾಹಿತಿಗಳನ್ನು ನೀಡಬಲ್ಲುದು.

ನಾವು ಸಂಗ್ರಹಿಸಿದ ತಾಡವಾಲೆ ಗ್ರಂಥಗಳ ವಿವರಣಾತ್ಮಕ ಸೂಚಿಯೊಂದನ್ನು ಪ್ರಕಟಿಸಿದರೆ ಸಂಶೋಧಕರಿಗೆ ಅನುಕೂಲವಾಗುವುದು ಮಾತ್ರವಲ್ಲದೆ ಅವುಗಳಲ್ಲಿನ ಮಹತ್ವದ ಕೃತಿಗಳನ್ನು ಹೆಕ್ಕಿ ಪ್ರಕಟಿಸಲಿಕ್ಕೂ ಅನುಕೂಲವಾಗಬಹುದು ಎಂಬ ದೃಷ್ಟಿಯಿಂದ ಈ ಪ್ರಕಟಣ ಕಾರ್ಯವನ್ನು ಕೈಗೊಂಡೆವು. ಇಂತಹ ಕಾರ್ಯಗಳ ಆವಶ್ಯಕತೆಯನ್ನು ಮನಗಂಡ ವಿಶ್ವವಿದ್ಯಾನಿಲಯ ಅನುದಾನ ಆಯೋಗವು ನಮ್ಮ ನೆರವಿಗೆ ಬಂತು. ಇದರಿಂದಾಗಿ ಈ ಪ್ರಕಟಣೆ ಸಾಧ್ಯವಾಯಿತು. ಇದಕ್ಕಾಗಿ ವಿಶ್ವವಿದ್ಯಾನಿಲಯ ಅನುದಾನ ಆಯೋಗಕ್ಕೆ ನಮ್ಮ ಕೃತಜ್ಞತೆಗಳು.

ಕೇಂದ್ರಕ್ಕೆ ಮೊದಲಿಗೆ ದಾನವಾಗಿ ಬಂದಿದ್ದ ಕೆಲವು ತಾಡವಾಲೆ ಗ್ರಂಥಗಳನ್ನು, ಅನಿವಾರ್ಯ ಸಂದರ್ಭದಲ್ಲಿ ದಾನಿಗಳು ವಾಪಸು ಪಡೆದರಾಗಿ K 16, T 23, T 46, T 47 ಮತ್ತು T 65 ಸಂಖ್ಯೆಗಳನ್ನು ಆಯಾ ವಿಭಾಗದ ಅನುಕ್ರಮದಲ್ಲಿ ಕೈಬಿಡಲಾಗಿದೆ.

ಈ ಪ್ರಕಟಣೆಯಿಂದ ಪ್ರಾಚೀನ ತಾಡವಾಲೆ ಗ್ರಂಥಗಳ ಬಗ್ಗೆ ಸಂಶೋಧನೆ ಮಾಡುವ ವಿದ್ವಾಂಸರಿಗೆ ಅನುಕೂಲವಾಗಬಹುದೆಂದು ನಂಬಿದ್ದೇವೆ. ಈ ತಾಡವಾಲೆ ಗ್ರಂಥಗಳನ್ನು ಓದಿ ವಿವರಣೆಗಳನ್ನು ಬರೆದು ಮುದ್ರಣಕ್ಕೆ ಸಿದ್ಧಗೊಳಿಸಿದ ಸಹೃದಯ ವಿದ್ವಾಂಸರಾದ ಪ್ರೊ. ಎಂ. ರಾಜಗೋಪಾಲಾಚಾರ್ಯರಿಗೆ ನಮ್ಮ ನಮನಗಳು. ಈ ಗ್ರಂಥವನ್ನು ಸುಂದರವಾಗಿ ಮುದ್ರಣ ಮಾಡಿಕೊಟ್ಟಿರುವ ಮೈಸೂರಿನ ಶಕ್ತಿ ಮುದ್ರಣಾಲಯದ ಶ್ರೀ ರಾ. ವೆಂ. ಶ್ರೀನಿವಾಸಮೂರ್ತಿ ಮತ್ತು ಶ್ರೀ ಆರ್. ಎಸ್. ಮೋಹನ್‌ಮೂರ್ತಿ ಅವರಿಗೆ, ಕರಡಚ್ಚುಗಳನ್ನು ತಿದ್ದಿಕೊಟ್ಟ ಡಾ. ಕೆ. ವಿ. ರಮೇಶ್ ಅವರಿಗೆ ಮತ್ತು ಈ ಸಂಬಂಧ ಕೇಂದ್ರಕ್ಕೆ ಎಲ್ಲ ಬಗೆಯ ನೆರವು ನೀಡಿದ ಮೈಸೂರಿನ ಗೀತಾ ಬುಕ್ ಹೌಸ್‌ನ ಶ್ರೀ ಎಂ. ಸತ್ಯನಾರಾಯಣರಾವ್ ಸೋದರರಿಗೆ ನಾವು ಋಣಿಗಳಾಗಿದ್ದೇವೆ.

ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ (ದ. ಕನ್ನಡ), ಅಕ್ಟೋಬರ್ ೬, ೧೯೯೧

ಕು. ಶಿ. ಹರಿದಾಸಭಟ್ಟ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪರಿವಿಡಿ

ಪ್ರಸ್ತಾವನೆ ೯

ತಾಡವಾಲೆ ಗ್ರಂಥಸೂಚಿ

ಭಾಗ ಒಂದುಂ : ಕನ್ನಡ ಲಿಪಿಯುಂ ಗ್ರಂಥಗಳುಂ ೨೫

ಭಾಗ ಎರಡುಂ : ತಿಗಳಾರಿ (ತಂಳುಂ) ಲಿಪಿಯುಂ ಗ್ರಂಥಗಳು ೫೩

ಭಾಗ ಮೂರು : ಮಲೆಯಾಳ ಲಿಪಿಯುಂ ಗ್ರಂಥಗಳುಂ ೧೨೧

ಭಾಗ ನಾಲ್ಕು : ನಂದಿನಾಗರಿ ಲಿಪಿಯುಂ ಗ್ರಂಥಗಳುಂ ೧೨೫

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಸ್ತಾವನೆ

The true University of these days
is a collection of books.

—*Carlyle*

ನಿಸರ್ಗದಿಂದ ಮನುಷ್ಯ ಅಪಾರವಾದ ಜ್ಞಾನರಾಶಿಯನ್ನು ಪಡೆದಿದ್ದಾನೆ. ಇದು ಒಬ್ಬನ ಅಥವಾ ಒಂದು ತಲೆಮಾರಿನ ಗಳಿಕೆಯಲ್ಲ. ಸಾವಿರಾರು ವರ್ಷಗಳಿಂದ ಮನುಷ್ಯ ಈ ನಿಸರ್ಗದ ರಹಸ್ಯವನ್ನು ಭೇದಿಸುತ್ತಲೇ ಬಂದಿದ್ದಾನೆ. ಇನ್ನೂ ಅದು ಮುಗಿದಿಲ್ಲ ; ಮುಗಿಯುವಂಥದೂ ಅಲ್ಲ. ಒಂದು ಜನ್ಮದ ಕಾಲಾವಧಿಯಲ್ಲಿ ತಿಳಿದುಕೊಳ್ಳಬಹುದಾದದ್ದು ಒಬ್ಬ ಅತ್ಯಲ್ಪವೆಂಬಷ್ಟು ಅಪಾರವಾಗಿ ಜ್ಞಾನ ಸಂಪತ್ತು ಬೆಳೆದಿದೆ. ಈಗ ಜ್ಞಾನವನ್ನು ಗಳಿಸಲು ಅನುಕೂಲತೆ ಹೆಚ್ಚಾಗಿದೆ. ಶ್ರಮ ಕಡಿಮೆ. ಆದ್ದರಿಂದ ಗಳಿಸಿದ ಜ್ಞಾನ ಸ್ಥಾಯಿಯಾಗಿ ನಿಲ್ಲುವುದು ಸಾಧ್ಯವಿಲ್ಲ. ಶ್ರಮದಿಂದ ಗಳಿಸಿದ್ದು ಮಾತ್ರ ದೀರ್ಘಕಾಲ ನಿಲ್ಲುವಂಥದು. ಹಾಗೆಯೇ ಬಂದದ್ದು ಹೀಗೆಯೇ ಹೋಗುತ್ತದೆ. ಭಾರತ ದೇಶ ಜ್ಞಾನಪೀಠವೆನಿಸಿದ ಕಾಲವಿತ್ತು. ದೇಶ ವಿದೇಶಗಳಿಂದ ಜನರು ಬಂದು ಇಲ್ಲಿಯೇ ನೆಲೆಯಾಗಿ ನಿಂತು ಇಲ್ಲಿಂದಲೇ ಜ್ಞಾನರಾಶಿಯನ್ನು ಗಳಿಸಿಕೊಂಡು ಹೋಗುತ್ತಿದ್ದರು. ನಾಲಂದಾ, ತಕ್ಷಶಿಲಾ ಮುಂತಾದ ನಗರಗಳಲ್ಲಿ ವಿದ್ಯಾಪೀಠವೋ ವಿಶ್ವವಿದ್ಯಾನಿಲಯವೋ ಇತ್ತು. ಆಗ ಬಂದ ವಿದ್ಯಾರ್ಥಿಗಳು ಇಲ್ಲೇ ಇದ್ದು, ತಾವು ಕಲಿತದ್ದನ್ನು ಬರೆದುಕೊಂಡೋ ಅಥವಾ ಬರೆದುಕೊಂಡೇ ಕಲಿತೋ ಮರಳುತ್ತಿದ್ದರು. ಸಾರಿಗೆ ಸಂಪರ್ಕ, ಮುದ್ರಣದ ಪ್ರತಿಗಳು, ಧ್ವನಿಮುದ್ರಣದ ಸೌಕರ್ಯಗಳೇನೂ ಇಲ್ಲದ ಆ ಕಾಲದಲ್ಲಿ ಕಾಲ್ನಡಿಗೆಯಲ್ಲಿ ಬಂದು, ಕಂಠ ಮತ್ತು ತಾಡ ಪತ್ರಗಳಲ್ಲಿ ಬರೆದುಕೊಂಡು ಕಲಿತೇ ವಿದ್ವಾಂಸರಾಗುತ್ತಿದ್ದರು. ಅವರು ಬರೆದ ಗ್ರಂಥಗಳನ್ನು ನೋಡುವಾಗ ಎಷ್ಟು ವಿಷಯಗಳು ಅವರಿಗೆ ಕಂಠಸ್ಥವಾಗಿದ್ದುವು, ಅವರ ಮೇಧಾಶಕ್ತಿ ಎಂಥದು ಎಂದು ನಮಗೀಗ ಅಚ್ಚರಿಯಾಗುತ್ತದೆ. ಆಗ ವಿಶ್ವವಿದ್ಯಾನಿಲಯಗಳೆಂದರೆ ದೊಡ್ಡ ದೊಡ್ಡ ಗ್ರಂಥಾಲಯಗಳು ಮಾತ್ರ ಅಲ್ಲಿ ಆಯಾ ಶಾಸ್ತ್ರಗಳಿಗೆ ಸಂಬಂಧಿಸಿದ ಗ್ರಂಥಗಳು ತಾಳೆಗರಿಯಲ್ಲೋ, ಭೂರ್ಜ ಪತ್ರಗಳಲ್ಲೋ ಲಿಖಿತವಾಗಿರುತ್ತಿದ್ದುವು. ಅವುಗಳಲ್ಲಿ ಅಪೂರ್ವವಾದ ದಾಖಲೆಗಳೂ ಇರುತ್ತಿದ್ದುವು. ಇಂತಹ ಎಷ್ಟೋ ಗ್ರಂಥಗಳು ಈಗ ಮಣ್ಣು ಪಾಲಾಗಿವೆ. ಬರೆಯುವುದಕ್ಕೆ ಹಿಂದಿನವರು ಕಂಠ (ಕಠಿಣೀ)ಎಂಬ ದಬ್ಬಣದಂತಹ ಲೋಹದ ಲೇಖನಿಯನ್ನು ಬಳಸುತ್ತಿದ್ದರು. ತಾಡಪತ್ರ, ಭೂರ್ಜಪತ್ರ, ಕೆಲವೊಮ್ಮೆ ಚರ್ಮವನ್ನು ಸಹ (ಸುಬಂಧುವಿನ ವಾಸವದತ್ತೆಯಲ್ಲಿ ಹೇಳುವಂತೆ)ಬಳಸುತ್ತಿದ್ದರು. ಶಿಲಾ ಲೇಖ, ತಾಮ್ರ ಪಟ್ಟಿಗಳಂತೂ ಇದ್ದೇ ಇರುತ್ತಿದ್ದುವು. ಅನ್ನಮಾಚಾರ್ಯರ ಅನೇಕ ಕೃತಿಗಳು ತಾಮ್ರ ಪಟ್ಟದಲ್ಲಿ ಬರೆದದ್ದು ತಿರುಪತಿಯಲ್ಲಿ ಈಚೆಗೆ ಬೆಳಕಿಗೆ ಬಂದಿವೆ. ಬರೆಯುವವನಿಗೆ ಕಾಯಸ್ಥ, ಕರಣಿಕ, ಲಿಪಿಕಾರ, ದಿವಿರ ಮುಂತಾದ ಹೆಸರುಗಳಿದ್ದುವು. ದಿವಿರ ಎಂಬುದು ದೇಬೀರ್ (ಫಾರ್ಸಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶಬ್ದ) ಪದದಿಂದ ಬಂದಿದೆ ಎಂದು ಕೆಲವರು, ಲಿಪಿ>ಲಿಬಿ>ದಿಬಿ>ದಿವಿ, ದಿವಿರ, ಹೀಗೆ ಬಂದಿದೆ ಎಂದು ಕೆಲವರ ಊಹೆ. ಲೇಖಕನು ಪೋಸಗಾರನೂ ಆಗಿರುತ್ತಿದ್ದ ಎಂಬ ಭಾವನೆಯೂ ಇತ್ತು. ಇವರಲ್ಲಿ ಕಾಯಸ್ಥ. ದಿವಿರ ಇವರು ಮಾತ್ರ ಪ್ರಜಾ ಪೀಡಕರು ಎಂದು ಕಾಣುತ್ತದೆ.

> ಚಾಟ ತಸ್ಕರ ದುರ್ವೃತ್ತ ಮಹಾಸಾಹಸಿಕಾದಿಭಿಃ ।
> ಪೀಡ್ಯಮಾನಾಃ ಪ್ರಜಾ ರಕ್ಷೇತ್ ಕಾಯಸ್ಥೈಶ್ಚ ವಿಶೇಷತಃ ॥
>
> —ಯಾಜ್ಞವಲ್ಕ್ಯ ೧-೩೩೬

ದಿವಿರನ ಬಗೆಗೂ ಒಂದು ಸುಭಾಷಿತ—

> ವಿನಾಮದ್ಯಂ ವಿನಾಮಾಂಸಂ ಪರಸ್ವಹರಣಂ ವಿನಾ ।
> ವಿನಾ ಪರಾಪಕಾರೇಣ ದಿವಿರೋ ದಿವಿ ರೋದಿತಿ ॥

—ಎಂದು ಹೇಳುತ್ತದೆ.

ಮೊದಲು ದಕ್ಷಿಣ ದೇಶದಲ್ಲಿ ತಾಡಪತ್ರದಲ್ಲೂ ಉತ್ತರ ದೇಶದಲ್ಲಿ ಭೂರ್ಜ ಪತ್ರಗಳಲ್ಲೂ ರಾಜ್ಯ ವ್ಯವಹಾರ, ಆಯವ್ಯಯಾದಿಗಳನ್ನು ಕಾಯಸ್ಥರೆಂಬ ವರ್ಗದವರು ಬರೆದಿಡುವ ಪದ್ಧತಿಯಿತ್ತು. ಆದ್ದರಿಂದಲೇ ಕಾಯಸ್ಥರಿಗೆ ಭೂರ್ಜಧ್ವಜ ಎಂಬ ಅಡ್ಡ ಹೆಸರೂ ಇದ್ದಿತು. ಇಂಥವರು ರಾಜಕಾರಣಿಗಳನ್ನು ಒಳಗೆ ಹಾಕಿಕೊಂಡು ಪ್ರಜಾಪೀಡಕರಾಗಿರುತ್ತಿದ್ದರೆಂದು ಕಾಣುತ್ತದೆ. ಇಂಥವರು ವಿದ್ವಾಂಸರೇನಲ್ಲ. ವಿದ್ವಾಂಸರ ಲೇಖಕರು ಲಿಪಿಕಾರರು, ಶಾಸ್ತ್ರಗಳನ್ನು ಬರೆದಿಡುವವರು, ಗುರುಗಳು ಹೇಳಿದ್ದನ್ನು ಶಿಷ್ಯರು ಬರೆದಿಟ್ಟುಕೊಳ್ಳುತ್ತಿದ್ದರು. ಆ 'ನೋಟ್ಸು'ಗಳೇ ಅಮೂಲ್ಯ ಗ್ರಂಥಗಳಾಗಿರುತ್ತಿದ್ದುವು. ಅಲ್ಲದೆ ಅವರಲ್ಲಿ ಕೆಲವರು ಸ್ವತಂತ್ರಗ್ರಂಥಗಳನ್ನು ಬರೆದರೂ ಅದರಲ್ಲಿ ಉದಾಹರಿಸುವ ಕೋಶಗಳು, ಸೂತ್ರ, ಸ್ಮೃತಿವಾಕ್ಯ ಇವನ್ನೆಲ್ಲ ಪರಿಶೀಲಿಸುವಾಗ ಅವರ ಅಧ್ಯಯನ ಎಷ್ಟು ಆಳವಾದದ್ದು, ಎಷ್ಟು ಖಚಿತವಾದದ್ದು ಎಂದು ಯಾರಿಗಾದರೂ ತಿಳಿಯಬಹುದು. ಇಂದು ನಮಗೆ ಒಂದು ಸಂಶೋಧನಾತ್ಮಕ ಪ್ರಬಂಧವನ್ನು ಬರೆಯಬೇಕಾದರೆ ನಮ್ಮ ಬಳಿ ಒಳ್ಳೆಯ ಗ್ರಂಥ ಸಂಗ್ರಹವಿದೆ. ಪ್ರತಿಗ್ರಂಥಗಳಲ್ಲಿ ಪರಿವಿಡಿ, ಅಕಾರಾದಿ ಅನುಕ್ರಮಣಿ, ಸೂಚಿಕೆಗಳು ಸಿದ್ಧವಾಗಿವೆ. ಎಲ್ಲ ಮುದ್ರಣದಲ್ಲಿ—ಪತ್ರಿಕೆಗಳಲ್ಲಿ ಸುಲಭದಲ್ಲಿ ದೊರೆಯುತ್ತವೆ. ಸಾಧನಗಳೆಲ್ಲ ಕೈಯಳತೆಯಲ್ಲಿ ಕಾಲಬುಡದಲ್ಲಿ ಸಿಗುವಹಾಗಿವೆ. ಆಗ ತಾಳೆಗರಿಯ ಗ್ರಂಥಗಳು ಮಾತ್ರ ಲಭ್ಯ. ಒಂದು ವಿಷಯ ಎಲ್ಲಿದೆಯೆಂದು ತಿಳಿಯಲು ಇಡೀ ಗ್ರಂಥವನ್ನು ಚೆನ್ನಾಗಿ ಓದಿದವನಿಗೆ ಮಾತ್ರ ಗೊತ್ತು. ಇತರರು ಓದಲು ಪರದಾಡಬೇಕು. ಅದಕ್ಕೆ ಕಣ್ಣು ಸಶಕ್ತವಾಗಿರಬೇಕು. ಇದು ಸಾಧ್ಯವೆ ? ಅವರು ತಾವು ಕಲಿತ ಗ್ರಂಥವನ್ನು ನೆನಪಿನಲ್ಲಿಟ್ಟುಕೊಳ್ಳುತ್ತಿದ್ದರು. ಯಾವುದೇ ಕೋಶವನ್ನೋ ಸ್ಮೃತಿಯನ್ನೋ ಉದ್ಧರಿಸಲು ಅವರಿಗೆ ಗ್ರಂಥಸೂಚಿ ಇರಲಿಲ್ಲ, ಹೀಗಿದ್ದರೂ ಅವರಲ್ಲಿ ಒಬ್ಬೊಬ್ಬರು ಉದ್ಧರಿಸುವ ಗ್ರಂಥಗಳನ್ನು ನೋಡುವಾಗ ಇದು ಮಹಾ ತಪಸ್ಸಿನ ಫಲ ಎಂದು ಇವತ್ತು ಸಹ ಒಬ್ಬ ವಿಚಾರವಂತನಿಗೆ ಕಾಣಬಹುದು. ಈ ಹೊತ್ತು ಒಬ್ಬ ತನ್ನ ಗ್ರಂಥದಲ್ಲಿ ಹತ್ತಾರು ವಿಷಯಗಳನ್ನು ಉಲ್ಲೇಖಿಸಬೇಕಾದರೆ ಆತ ಯಾವ ಗ್ರಂಥವನ್ನೂ ಪೂರ್ತಿ ನೋಡಬೇಕಾಗಿಲ್ಲ. 'ಇಂಡೆಕ್ಸ್ ಪಂಡಿತಾಃ ಕೇಚಿತ್ ಕೇಚಿತ್ ಡಿಕ್ಷ್ನರಿ ಪಂಡಿತಾಃ'

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಎಂಬ ವಿಡಂಬನಾತ್ಮಕ ಗಾದೆ ಹೇಳುವಂತೆ ಆಯಾ ಗ್ರಂಥಗಳ ಅನುಕ್ರಮಣಿಕೆ ನೋಡಿಕೊಂಡೋ ಅಥವಾ ಬೇರೆಯವರ ಲೇಖನದಲ್ಲಿ ಉದ್ಧರಿಸಿದ್ದನ್ನು ನೋಡಿಕೊಂಡೋ (ಅದು ತಪ್ಪಾಗಿದ್ದರೂ) ಅದರಲ್ಲಿ ಹೀಗೆ ಹೇಳಿದೆ ಎಂದುಬಿಟ್ಟರಾಯಿತು. ಉಳಿದವರೂ ಅವನ ಸಾಮರ್ಥ್ಯದ ಕುರಿತು ಮೆಚ್ಚಿಗೆ ತಾಳುತ್ತಾರೆ. ಇಂತಹ ಪ್ರಬಂಧಗಳಿಗೇ ಡಾಕ್ಟರೇಟನ್ನೋ ಮತ್ತೊಂದನ್ನೋ ಕೊಡುವ ಸಂಪ್ರದಾಯವೀಗ ಬೆಳೆದುಬಂದಿದೆ. ನಾವೀಗ ಪುಸ್ತಕಗಳಿಗೆ ಎಷ್ಟು ಋಣಿಗಳಾಗಿದ್ದೇವೆಯೆಂದರೆ, ಇಂದು ನಮ್ಮೆಲ್ಲ ಜ್ಞಾನವೂ ಪುಸ್ತಕಾಧೀನ ! ಒಂದೊಮ್ಮೆ ನಮಗೆ ಯಾವ ಪುಸ್ತಕವೂ ಸಿಗಲಾರದು ಎಂದಾದರೆ, ಅಥವಾ ಕಣ್ಣೇ ಕಾಣಿಸದಿದ್ದರೆ, ನಮ್ಮ ತಿಳಿವಳಿಕೆಯೆಲ್ಲ ವ್ಯರ್ಥವೇ ಸರಿ ಎಂದು ಒಮ್ಮೆ ಕಣ್ಮುಚ್ಚಿ ಯೋಚಿಸಿದರೆ ಹೊಳೆದೀತು ! ಆಗ ನಾವು ಬರೇ ನಿರಕ್ಷರ ಕುಕ್ಷಿಗಳಾಗವೇ ! ಇದಕ್ಕೆ ಕಾರಣ : ನಮಗಿರುವ ಸೌಕರ್ಯಗಳು ಮತ್ತು ನಮ್ಮ ಅಧ್ಯಯನದ ಕ್ರಮ.

ಹಸ್ತಪ್ರತಿಗಳ ಆವಶ್ಯಕತೆ

ನಮ್ಮ ಪ್ರಾಚೀನ ಗ್ರಂಥಗಳಲ್ಲಿ ಉತ್ತಮವಾದವೆಲ್ಲ ಈಗ ಮುದ್ರಿತವಾಗಿವೆ, ಕಳಪೆಯಾದುವು ಕೆಲವು ಮಾತ್ರ ಗೆದ್ದಲು ಪಾಲಾಗಿರಬಹುದು ಎನ್ನುವುದೂ ಸರಿಯಲ್ಲ. ಉಳಿದಿರುವವೆಲ್ಲಾ ಉತ್ತಮವೇನೋ ಹೌದು. ಗೆದ್ದಲುಪಾಲಾದವು ಕಳಪೆಯೆಂದು ಹೇಗೆ ಹೇಳುವುದು? ಝಾಂಸಿರಾಣಿ ಲಕ್ಷ್ಮೀಬಾಯಿಯ ಕಾಲದಲ್ಲಿ ಬಹು ದೊಡ್ಡ ಗ್ರಂಥಾಲಯಕ್ಕೆ ಬೆಂಕಿ ಬಿದ್ದು ಸುಟ್ಟು ಹೋಗಿದೆಯೆಂದು ಇತಿಹಾಸ ಹೇಳುತ್ತದೆ. ಹೀಗೆ ಎಷ್ಟು ಗ್ರಂಥಾಲಯಗಳು ನೆಲಸಮವಾಗಿವೆಯೋ ? ಅವುಗಳಲ್ಲಿ ಎಂಥ ಅಮೂಲ್ಯ ಗ್ರಂಥಗಳಿದ್ದವೋ ಯಾರಿಗೆ ಗೊತ್ತು ? ಶ್ರೀ ಮಧ್ವಾಚಾರ್ಯರು ಉದ್ಧರಿಸುವ ಅನೇಕ ಗ್ರಂಥಗಳು ಈಗ ಉಪಲಬ್ಧವಿಲ್ಲ. ಬ್ರಹ್ಮತರ್ಕದಂಥ ಗ್ರಂಥಗಳು ಈಗ ಸಿಗುತ್ತದೆಯೇ ? ಹಾಗೆಂದು ಆ ಗ್ರಂಥವೇ ಇರಲಿಲ್ಲವೆನ್ನಲಾಗುವುದೆ? ಈಗ ಉಪಲಬ್ಧವಿರುವ ಗ್ರಂಥಗಳು ಮುದ್ರಿತವಾಗಿದ್ದರೂ, ನಮಗೆ ಆ ಹಳೆಯ ಹಸ್ತಪ್ರತಿಗಳಿಂದ ಆಗುವ ಪ್ರಯೋಜನವಿನ್ನೂ ಇದೆ. ಇಂದು ಪ್ರಸಿದ್ಧ ಗ್ರಂಥಗಳು ಮುದ್ರಿತವಾಗಿ ಟಿಪ್ಪಣಿಗಳೊಡನೆ ಲಭ್ಯವಾಗಿವೆ. ಇನ್ನು ಆ ಹಸ್ತಪ್ರತಿಗಳು ಏಕೆ ? ಅವನ್ನು ಓದುವ ತಾಳ್ಮೆಯಾದರೂ ಯಾರಿಗಿದೆ ? ಇವುಗಳ ರಕ್ಷಣೆ ಹೇಗೆ ! ಇವುಗಳಿಂದ ಪ್ರಯೋಜನವಾದರೂ ಯಾವ ರೀತಿಯದು ? ಮುಂತಾದ ಪ್ರಶ್ನೆಗಳು ನಮ್ಮನ್ನು ಕಾಡುತ್ತವೆ. ಒಂದು ನಿಟ್ಟಿನಲ್ಲಿ ಇದೂ ಸರಿ. ಎಲ್ಲರಿಗೂ ಈ ಹಸ್ತಪ್ರತಿಗಳಿಂದ ಪ್ರಯೋಜನವಿದೆ ಎನ್ನಲಾಗುವುದಿಲ್ಲ. ನಾವಿಂದು ಯಾವ ಗ್ರಂಥಗಳನ್ನು ಓದುತ್ತೇವೆಯೋ ಅಧ್ಯಯನ ಮಾಡುತ್ತೇವೋ ಅವೆಲ್ಲ ಸರಿಯಾದ ಪಾಠವೆಂಬ ಭ್ರಮೆ ನಮ್ಮಲ್ಲಿರುವವರೆಗೆ ಇವುಗಳಿಂದ ಹೆಚ್ಚಿನ ಪ್ರಯೋಜನವಿಲ್ಲವೆಂಬುದನ್ನು ಒಪ್ಪುವ. ಆದರೆ ಹಸ್ತಪ್ರತಿಗಳಿಂದ ಸರಿಯಾದ ಪಾಠ ಸಿಗುವುದಾದರೆ ನಮ್ಮ ಅಜ್ಞಾನ ಬೆಳಕಿಗೆ ಬರುವುದಿಲ್ಲವೆ ? ಈಗಿರುವ ಪಾಠದಲ್ಲಿ ಪ್ರಮಾದವಶಾತ್ ನುಸುಳಿಕೊಂಡ ತಪ್ಪನ್ನೂ ನಾವು ಹಾಗೇ ಅರ್ಥೈಸಿಕೊಳ್ಳುತ್ತೇವೆ. ಮತ್ತೆ ಕೆಲವಕ್ಕೆ ನಮಮನಮಗೆ ತೋಚಿದ್ದೇ ಅರ್ಥ. ಮತ್ತೆ ಕೆಲವನ್ನು 'ಗ್ರಂಥಗ್ರಂಥಿ'ಗಳೆಂದು ಬಿಟ್ಟುಬಿಡುತ್ತೇವೆ. ಸ್ವಲ್ಪ ಸಂದೇಹ ಬಂದಾಗ ಹೀಗೂ ಆಗಬಹುದು ಹಾಗೂ ಸರಿ ಎಂದು ಬರುಡೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬಿಡಲೂ ಹಿಂಜರಿಯುವುದಿಲ್ಲ. ಅಥವಾ ಗ್ರಂಥ ಕರ್ತನೇ ಪ್ರಮಾದದಿಂದ ತಪ್ಪಿದ್ದಾನೆ ಎಂದು ನಮ್ಮ ಪಾಂಡಿತ್ಯವನ್ನು ಪ್ರದರ್ಶನ ಮಾಡುತ್ತೇವೆ. ಇಲ್ಲಿಯವರೆಗೆ ನಮ್ಮ ತಿಳಿವಳಿಕೆಯ ಬಗೆಗೆ ನಮಗೆ ಹೆಮ್ಮೆ ಇದೆ. ದಿ. ಮಂಜೇಶ್ವರ ಗೋವಿಂದ ಪೈಗಳ ಹಾಗೆ ಈ ಅಧ್ಯಯನಶೀಲರು ಎಷ್ಟು ಮಂದಿ ಸಿಗಬಹುದು ? ಮಹಾಕವಿಗಳ ಮೂಲ ಗ್ರಂಥಗಳು ಈಗ ಪೂರ್ತಿಯಾಗಿ ಲಭ್ಯವೆ ? ಅವು 'ಸಂಗ್ರಹ' ರೂಪದಲ್ಲಿ ಮಾತ್ರ ಲಭ್ಯವಲ್ಲವೆ ? ನಾಗವರ್ಮನ ಕನ್ನಡ ಕಾದಂಬರಿ ಮೂಲ ಈಗೆಲ್ಲಿದೆ ? ಕಾದಂಬರೀ ಸಂಗ್ರಹವನ್ನೇ ಅವನ ಕಾವ್ಯವೆಂದು ಅಧ್ಯಯನ ಮಾಡುತ್ತೇವೆ. ಅದರಲ್ಲಿ ಕ್ಲಿಷ್ಟವೂ ಅಮೂಲ್ಯವೂ ಆದ ಭಾಗ ಈಗ ದೊರಕುವುದು ಕಷ್ಟ. ದೊರಕಿದರೂ ನಮಗೆ ಬೇಡವಾಗಿದೆ. ಹರಿಶ್ಚಂದ್ರ ಕಾವ್ಯ ಸಂಗ್ರಹ ಮಾತ್ರ ಈಗ ದೊರೆಯುತ್ತದೆ. ಅದರಲ್ಲೂ ಆ ಮುದ್ರಿತ ಪಾಠಗಳಲ್ಲಿ ದೋಷಗಳಿದ್ದರೂ ಅದನ್ನೇ ಸರಿಯೆಂದು ಒಪ್ಪಿಕೊಳ್ಳುವುದು, ಅಥವಾ ಆ ದೋಷವನ್ನು ಕವಿಯ ತಲೆಗೇ ಅಂಟಿಸಿ ನಮ್ಮ ವಿಮರ್ಶಕ ಬುದ್ಧಿಯನ್ನು ಮೆರೆಯುವುದು ನಮ್ಮ ಜಾಯಮಾನವಾಗಿದೆ. ಅವುಗಳ ಮೂಲ ಶೋಧನೆಗೆ ಹೊರಟಾಗಲೇ ನಮ್ಮ ಅಜ್ಞಾನ ಬೆಳಕಿಗೆ ಬರಲು ಸಾಧ್ಯ. ಈ ಬಗೆಗೆ ಒಂದೆರಡು ಘಟನೆಗಳನ್ನು ಇಲ್ಲಿ ಉದಾಹರಿಸಿದರೆ ಅಪ್ರಸ್ತುತವೆನಿಸಲಾರದು.

ನಾನು ಪ್ರಾಧ್ಯಾಪಕನಾಗಿದ್ದಾಗ ಹರಿಶ್ಚಂದ್ರಕಾವ್ಯ(ಸಂಗ್ರಹ)ವನ್ನು ಪಾಠ ಹೇಳುವ ಸಂದರ್ಭ ಬಂದಿತ್ತು. ಆಗ ಅದರಲ್ಲಿ ಬರುವ 'ಕತ್ತುರಿಯ ಸುಟ್ಟರಲು ಕುರುಕುವರೆ ?' ಎಂಬ ಭಾಗಕ್ಕೆ ಅರ್ಥಹೇಳುವಾಗ, ಟಿಪ್ಪಣಿಯಲ್ಲಿ ಕತ್ತುರಿ = ಕಸ್ತೂರಿ(ಸಂ) ಎಂದಿದ್ದುದನ್ನು ನೋಡಿ ಹಾಗೆಯೇ ಅರ್ಥಹೇಳಬೇಕಾಯಿತು. ಆದರೆ ನನ್ನ ಮನಸ್ಸಿಗೆ ಇದು ಸಮಂಜಸವೆನಿಸಲಿಲ್ಲ. ಕಸ್ತೂರಿಯನ್ನು ಸುಟ್ಟರೆ ಅರಳಾಗುವುದಾದರೂ ಹೇಗೆ ? ಅದು ಬೂದಿಯಾದೀತು. ಇದೇ ಪ್ರಶ್ನೆಯನ್ನು ಒಬ್ಬ ಸೂಟಿ ವಿದ್ಯಾರ್ಥಿಯೂ ಕೇಳಿದ. ನಾನೇನು ಹೇಳುವುದು? ಟಿಪ್ಪಣಿ ಹಾಗೇ ಇದೆ. ಅರಳಾಗುವಂತಹ ಕಸ್ತೂರಿ ಬೇರೆ ಇರಬಹುದು. ಇದನ್ನು ವಿಚಾರ ಮಾಡಿ ಮುಂದಿನ ವಾರ ತಿಳಿಸುತ್ತೇನೆ ಎಂದು ಅವನಿಗೆ ತಾತ್ಕಾಲಿಕ ಪರಿಹಾರವನ್ನು ಹೇಳಿದೆ. ಇದು ನನ್ನ ಮನಸ್ಸನ್ನು ಕೊರೆಯುತ್ತಲೇ ಇತ್ತು. ನಾನು ಕೂಡಲೆ ದಿ॥ ತೆಕ್ಕುಂಜೆಯವರಿಗೆ ಈ ವಿಚಾರ ಬರೆದು, ಇದರ ಮೂಲವೇನು ತಿಳಿಸಬೇಕೆಂದು ಅರಿಕೆ ಮಾಡಿಕೊಂಡೆ. ಅವರಿಗೂ ಈ ಪ್ರಶ್ನೆ ಬಂದಿತ್ತಂತೆ. ಅವರು ಎಲ್ಲಿಂದಲೋ ಹರಿಶ್ಚಂದ್ರಕಾವ್ಯದ ಹಸ್ತಪ್ರತಿಯನ್ನು ತಲಾಸು ಮಾಡಿ ಅದರಲ್ಲಿ ಶುದ್ಧ ಪಾಠವು **'ಕುತ್ತರಿಯ ಸುಟ್ಟರಲು ಕುರುಕುವರೆ'** ಎಂದಿದೆ ಎಂದು ಸಕಾಲದಲ್ಲಿ ಉತ್ತರ ಬರೆದರು. ಈಗ ಚೆನ್ನಾಗಿ ಅರ್ಥವಾಯಿತು. ಕುತ್ತರಿಯೆಂದರೆ ಹುಲ್ಲು ಕುತ್ತರೆ (ಬಣಬೆ). ಘಟ್ಟದ ಮೇಲೆ ಎಕಾರಾಂತಪದಗಳನ್ನು ಇಕಾರಾಂತವಾಗಿ (ಮನೆ, ಮನಿ) ಉಚ್ಚರಿಸುವ ರೂಢಿ ಇದೆ. ಹಾಗೆ ಕುತ್ತರೆ ಎಂಬುದು ಇಲ್ಲಿ ಕುತ್ತರಿ ಎಂದಾಗಿದೆ. ಇದು ತಿಳಿಯದೆ ಕತ್ತುರಿ ಎಂದು ಮುದ್ರಿಸಿರಬೇಕು. ಹುಲ್ಲಿನ ಬಣಬೆಯಲ್ಲಿ ಅಲ್ಲಲ್ಲಿ ಬತ್ತವಿರುತ್ತದೆ. ಅರಳು ಮಾಡಬೇಕಾದರೆ ಹುಲ್ಲನ್ನು ಜಪ್ಪಿ ಬತ್ತವನ್ನು ತೆಗೆದು ಹುರಿಯಬೇಕು. ಎಲ್ಲಾದರೂ ಹುಲ್ಲಿನ ರಾಶಿಗೇ ಬೆಂಕಿಹಾಕಿ ಅರಳು ಮಾಡುವುದುಂಟೆ ? ಎಂಬ ಅರ್ಥ ಸಲೀಸಾಯಿತು.

ಮತ್ತೊಮ್ಮೆ 'ಜಗನ್ನಾಥವಿಜಯ' ಪಾಠಮಾಡುವಾಗ ೨ನೇ ಆಶ್ವಾಸದ ಪರಿಸಂಖ್ಯಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಲಂಕಾದ ಒಂದು ಗದ್ಯ ಭಾಗದಲ್ಲಿ 'ಪವಮಾನ ವಿಸ್ತಾರಂ ವ್ಯೋಮದೊಳ್' ಎಂದಿತ್ತು. ಆಗ ನಾನು ದಿ|| ತೀ. ನಂ. ಶ್ರೀಯವರಿಗೆ ಬರೆದು ಇಲ್ಲಿ ಪಾಠ ದೋಷವಿದೆಯೋ ಎಂದು ಕೇಳಿದೆ. ಅದಕ್ಕವರು ಮೂಲಮಾತೃಕೆಯಲ್ಲಿ 'ಅಪಮಾನ ವಿಸ್ತಾರಂ ವ್ಯೋಮದೊಳ್' ಎಂದಿದೆ ಎಂದು ಬರೆದರು. ಈ ಅರ್ಥ ಸುಗಮವಾಯಿತು. ಆ ಊರಲ್ಲಿ ಅಪಮಾನ ಮಾಡುವುದೆಂದೇ ಇಲ್ಲ. 'ಅಪಮಾನ ವಿಸ್ತಾರ' ಎಂಬ ಶಬ್ದ ಬಳಕೆಯಲ್ಲಿರುವುದಾದರೆ ಆಕಾಶ ಎಂಬ ಅರ್ಥದಲ್ಲಿ ಮಾತ್ರ. ಅಪ+ಮಾನ (ಅಳತೆ ಇಲ್ಲದ) ವಿಸ್ತಾರ(ವೈಶಾಲ್ಯ) ಎಂಬಲ್ಲಿ ಮಾತ್ರ ಎಂದು ಹೊಳೆದಾಗ ಪಾಠ ಸರಿಯಾಯಿತು.

ಕೆಲವೊಮ್ಮೆ ಅರ್ಥ ಹೊಂದಿದರೂ ಔಚಿತ್ಯವಿಲ್ಲದೇ ಹೋಗುವುದುಂಟು. 'ಭಾರತ ಕಥಾ ಮಂಜರಿ'ಯ (ಗದುಗಿನ ಭಾರತ) ಸಭಾಪರ್ವದ ಒಂದು ಪದ್ಯ

ಆ ನೃಪಾಲರ ಮಗನೊ ಮೊಮ್ಮಗನೊ
ನೀನವರ ಬಾಂಧವನೊ ಭೃತ್ಯನೊ
ನೂನವಕ್ಷನೋ ಬೆರಳ ಬದಗನೋ ಕುರುಳ ಕೋಮಲನೋ ||

ಎಂದು ಮುದ್ರಿತವಾಗಿದೆ. ಇದು ಜರಾಸಂಧ ಕೃಷ್ಣನನ್ನು ತೆಗಳುವ ಸಂದರ್ಭ. ಇಲ್ಲಿ ಕುರುಳ ಕೋಮಲನೋ ಎಂಬುದು ನಿಂದೆಯೋ ಸ್ತುತಿಯೋ ? ಸ್ಫುಟವಾಗುವುದಿಲ್ಲ. ಇದರ ಮೂಲದಲ್ಲಿ 'ಕುರುಳ ಗೋವಳನೋ' ಎಂದಿದೆ. ನೀನು 'ಗುಂಗುರು ಕೂದಲಿನ' ಅಥವಾ ಸೆಗಣಿ ಎತ್ತುವ ಗೊಲ್ಲರವನೋ ಎಂಬುದು ನಿಂದೆಯನ್ನು ತೀವ್ರವಾಗಿ ಸೂಚಿಸುತ್ತದೆಯಲ್ಲವೆ. ಗೋವಿನ ಹಾಡಿನ ಒಂದು ಪದ್ಯ—ಇದರ ಪಾಠ ಹೀಗಿದೆ.

ಉದಯ ಕಾಲದೊಳೆದ್ದು ಗೊಲ್ಲನು
ನದಿಯ ಸ್ನಾನವ ಮಾಡಿಕೊಂಡು
ಮುದದಿ ತಿಲಕವ ಪಣೆಯೊಳಿಟ್ಟು
ಚದುರ ಶಿಖೆಯನು ಹಾಕಿದ ||

ಎಂದಿದೆ. ಆದರೆ ಇಲ್ಲಿ ಮೂರನೇ ಮತ್ತು ನಾಲ್ಕನೆಯ ಸಾಲಿನಲ್ಲಿ ಬರುವ ಮುದದಿ, ಚದುರ ಎಂಬ ಪದಗಳು ಕೇವಲ ಪ್ರಾಸಕ್ಕಾಗಿ ಬಂದಿವೆಯೆಂದು ಎನಿಸುವುದಿಲ್ಲವೆ ? ಆ ವಿಶೇಷಣಗಳಿಗೆ ಅರ್ಥ ವಿಶೇಷವೇನು ? ಕಾಣಿಸದು. ಆದರ ಮೂಲದಲ್ಲಿ

ಮದನ ತಿಲಕವ ನಿಟ್ಟು ಪಣೆಯೊಳು
ಚದುರಸಿಕೆಯನು ಹಾಕಿದ

ಎಂದಿದೆ. ಮದನ ತಿಲಕ ಎಂದರೆ ಕಸ್ತೂರಿ ತಿಲಕ (ಮದನ=ಕಸ್ತೂರಿ), ಚದುರಸಿಕೆ> ಚತುರಸ್ರಕ, ಚೌಕ, ವಲ್ಲಿ, ಶಾಲು. ಇಲ್ಲಿನ ಔಚಿತ್ಯವನ್ನು ಗಮನಿಸಿ. ನಾವು ಬಾಲ್ಯದಲ್ಲಿ ಕಲಿತ ಪಾಠ ತಪ್ಪಾಗಿದ್ದರೂ ಅದಕ್ಕೇ ಅಂಟಿಕೊಳ್ಳುವ ವ್ಯಾಮೋಹ ಹೆಚ್ಚಾಗಿರುತ್ತದೆ. ಈಗ ಇದು ಸರಿಯಲ್ಲವೆಂದು ತಿಳಿದರೂ ಈ ಮೂಲ ಪಾಠ ನಮಗೆ ಸರಿಯೆನ್ನಲೂ ಮನಸ್ಸು ಒಪ್ಪುವುದಿಲ್ಲ. ಇದೇ ಪರಂಪರೆ ಮುಂದೆ ಬೆಳೆಯುತ್ತದೆ. ಆಗ ಪರಿಣಾಮ ವೇನು ?

ಒಮ್ಮೆ ಶ್ರೀ ವಿದ್ಯಾಮಾನ್ಯ ತೀರ್ಥ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ವಾದಿರಾಜರ ಮೇಲೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಾನೊಂದು ಉಪನ್ಯಾಸಮಾಡಬೇಕಾಯಿತು. ಆಗ ಅಲ್ಲಿ ವಾದಿರಾಜರ—

ವನಜಲೋಚನಹರಿ ವನಿತೆಯೂದುವ ಶಂಖ
ಧ್ವನಿ ಕೇಳಿಬಂದ ನರಹರಿ ।
ಧ್ವನಿ ಕೇಳಿಬಂದ ನರಹರಿ ಶ್ರೀಕೃಷ್ಣ
ಅನಿರುದ್ಧ ನಮ್ಮ ಮನೆದೈವ ಜೋ-ಜೋ ॥

ಎಂಬ ಪದ್ಯವನ್ನು ಉದ್ಧರಿಸಿ ಮಾತಾಡಿದೆ. ಉಪನ್ಯಾಸ ಮುಗಿದ ಬಳಿಕ ಸ್ವಾಮಿಗಳು ನನ್ನನ್ನು ಕರೆದು, ಶಂಖವು ಲಕ್ಷ್ಮೀ ಸ್ವರೂಪ, ಅದನ್ನು ಹೆಂಗಸರು ಊದಬಾರದು ಎಂದು ಶಾಸ್ತ್ರವಿದೆ. ವಾದಿರಾಜರು ಏಕೆ ಹೀಗೆ ಬರೆದರು ? ಎಂದು ನನ್ನನ್ನು ಕೇಳಿದರು. ನಾನೇನು ಹೇಳುವುದು ? ಹಾಗೆ ಪಾಠವಿದೆ, ಇನ್ನು ವಿಚಾರ ಮಾಡಿ ಹೇಳುವೆ ಎಂದು ತಿಳಿಸಿದೆ. ಉ.ಲ. ಹಯವದನಾಚಾರ್ಯರಲ್ಲಿ ವಾದಿರಾಜರ ಹಾಡುಗಳ ಹಸ್ತ ಪ್ರತಿ ಇದೆ ಯೆಂದು ಕೇಳಿದ್ದೆ. ಒಮ್ಮೆ ಅವರನ್ನು ಈ ಪದ್ಯದ ಪಾಠದ ವಿಚಾರ ಕೇಳಿದಾಗ ಅವರು ತಮ್ಮ ಹಸ್ತ ಪ್ರತಿಯಲ್ಲಿ—

ವನಜ ಲೋಚನ ಹರಿ । ವನಿತೆಯುಳು ಹೋ ಎಂಬ
ಧ್ವನಿ ಕೇಳಿ ಬಂದ ನರಹರಿ ।

ಹೀಗಿದೆ ಎಂದರು. ಇಲ್ಲಿ ದ್ರೌಪದಿ ವಸ್ತ್ರಾಪಹಾರದ ಸಂದರ್ಭ ಚೆನ್ನಾಗಿ ಸ್ಫುಟವಾಗು ತ್ತದೆ. ಹಿಂದಿನ ಪಾಠದಲ್ಲಿ ಶಂಖವೂದಿದ್ದು ಯಾರು ? ಯಾವ ಸಂದರ್ಭ, ಒಂದೂ ತಿಳಿಯುವುದಿಲ್ಲ. ಹೀಗೆ ಅರ್ಥವಾಗದಿದ್ದರೂ ನಾವು ಅವನ್ನು ಕಣ್ಮುಚ್ಚಿ ಒಪ್ಪಿಕೊಳ್ಳುತ್ತಾ ಬಂದಿದ್ದೇವೆ. ವಾದಿರಾಜರ ಅನೇಕ ಕೀರ್ತನೆಗಳಲ್ಲಿ ಕೆಲವು ಸಂದಿಗ್ಧ ಪಾಠಗಳು ಇನ್ನೂ ಇವೆ. ಇವನ್ನೆಲ್ಲಾ ಪರಾಮರ್ಶಿಸಲು ಮುದ್ರಿತ ಪುಸ್ತಕಗಳು ನೆರವಾಗಬಲ್ಲವೆ ?

ಸಂಸ್ಕೃತದಲ್ಲಿಯಂತೂ ಇಂತಹ ಅಶುದ್ಧ ಪಾಠಗಳು ಹೇರಳವಾಗಿ ಸಿಗುತ್ತವೆ. ಒಮ್ಮೆ 'ಸಪ್ತಶತೀ' (ದೇವೀಮಾಹಾತ್ಮೆ)ಯನ್ನು ಪರಿಷ್ಕರಿಸಿ ಮುದ್ರಿಸಬೇಕಾಯಿತು. ಶ್ರೀ ಪಾವಂಜೆ ಸೇತುಮಾಧವರಾಯರು ಇದಕ್ಕಾಗಿ ನನ್ನನ್ನು ಕೇಳಿಕೊಂಡರು. ನಾನು ಒಪ್ಪಿದೆ. ಅದರಲ್ಲಿ ಹಲವಾರು ಅಶುದ್ಧ ಪಾಠಗಳು ಸೇರಿದ್ದು ಕಂಡುಬಂತು. ಅದರಲ್ಲಿ—

ಪೂರ್ಣೇಂದು ಪ್ರತಿಮದ್ಯುತಿಂ ನಿಜಪದಂಸೇವ್ಯಂಸುಧಾವಿಪ್ಲುತಾಂ—

ಎಂಬ ಧ್ಯಾನ ಅನನ್ವಿತವಾಗಿತ್ತು. ಪಾರಾಯಣ ಮಾಡುವ ಮಹನೀಯರೂ ಅದು ಆರ್ಷಪ್ರಯೋಗವಿರಬಹುದೆಂಬ ವಿಶ್ವಾಸದಿಂದ ಹಾಗೇ ಓದುತ್ತಾ ಬಂದಿದ್ದರು. ಬೇರೊಂದು ಪಾಠದಲ್ಲಿ ಇದೇ ಧ್ಯಾನ—

ಪೂರ್ಣೇಂದು ಪ್ರತಿಮದ್ಯುತಿಂ ನಿಜವತಂಸೇಂದ್ವಂಶುಧಾರಾಪ್ಲುತಾಂ

ಎಂದು ಶುದ್ಧವಾಗಿ ದೊರಕಿತು. ಮತ್ತು ದೇವೀಮಾಹಾತ್ಮೆಯ ಪ್ರಥಮ ಚರಿತದಲ್ಲಿ

ಸ ತತ್ರಾಶ್ರಮಮದ್ರಾಕ್ಷೀತ್ ದ್ವಿಜವರ್ಯಸ್ಯ ಮೇಧಸಃ ।

ಎಂದಿತ್ತು. 'ಅವನು ಮೇಧಾ ಎಂಬ ಋಷಿವರ್ಯನ ಆಶ್ರಮವನ್ನು ನೋಡಿದ' ಎಂದರ್ಥ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೇಧಾ ಶಬ್ದ ಆಕಾಂರಾತ ಸ್ತ್ರೀಲಿಂಗ, ಇದು ಬಹುವ್ರೀಹಿ ಸಮಾಸದಲ್ಲಿ ಮಾತ್ರ 'ನಿತ್ಯಂ ಅಸಿಚ್ ಪ್ರಜಾಮೇಧಯೋಃ' ಎಂಬುದರಿಂದ ಸಕಾರಾಂತವಾಗಬೇಕು. ಇದೇಕೆ ಹೀಗಿದೆ? ಎಂದು ಒಂದು ಹಸ್ತಪ್ರತಿಯನ್ನು ನೋಡುವಾಗ ಅಲ್ಲಿ—

ಸ ತತ್ರಾಽಶ್ರಮ ಮದ್ರಾಕ್ಷೀತ್ ದ್ವಿಜ ! ವರ್ಯಃ ಸುಮೇಧಸಃ ।

ಎಂದಿತ್ತು. ಈಗ 'ಸುಷ್ಠು ಮೇಧಾ ಯಸ್ಯ ಸಃ ಸುಮೇಧಾಃ ತಸ್ಯ ಸುಮೇಧಸಃ' ಎಂದು ಸ್ಪಷ್ಟವಾಗಿ ಬಹುವ್ರೀಹಿ ಕಾಣುತ್ತದೆ. ಆತ ಸುಮೇಧಾ ಎಂಬ ಮುನಿಯು ಆಶ್ರಮ ನೋಡಿದ ಎಂದು ಅರ್ಥ. ದೇವೀ ಭಾಗವತದಲ್ಲೂ ಬರುವ ಇದೇ ಕಥೆಯಲ್ಲಿ ಮುನಿಯ ಹೆಸರು ಸುಮೇಧಾ ಎಂದೇ ಇದೆ. ಹೀಗೆ ಇದರಲ್ಲಿ ಸುಮಾರು ೩೦ ಅಪಪಾಠಗಳು ದೊರೆತವು.

ಇನ್ನು ಕೆಲವರು ಮೂಲ ಅರ್ಥವಾಗದೆ ತಮಗೆ ಖುಶಿ ಕಂಡಂತೆ ತಿದ್ದುವುದೂ ಇದೆ. ಇದು ಇನ್ನೂ ಹೆಚ್ಚಿನ ಪ್ರಮಾದ–ಸಪ್ತಶತೀಯ ೨ ಚರಿತದ ಧ್ಯಾನದಲ್ಲಿ

ಪರಮಾಗತಿರಂಬಿಕೇ ಮಯೇಮೌ
– ◡ – – ◡ –
ಚರಣೌ ತೇ ಮಹಿ । ಷಾಸು(ರ)ಹಾರಿಣೌ ।
ಸುರಲೋಕ ಸಮಸ್ತ ವಂದನೀಯೌ
ಸುಲಭೌ ಚಿಂತಯಿತುಂ ಸುಚೇತಸಾಮ್ ॥

ಸಪ್ತಶತೀ ಅ. ೨, ಧ್ಯಾನ

ಇದರಲ್ಲಿ ತಪ್ಪು ಏನೂ ಇಲ್ಲ. ಆದರೆ ಇದು ಔಪಚ್ಛಂದಸಿಕ + ವೈತಾಲೀಯ ವೃತ್ತಗಳ ಮಿಶ್ರಣದಿಂದಾದ ಒಂದು ಉಪಜಾತಿ ವೃತ್ತ. ಇದರ ೨ನೇ ಪಾದದ ಉತ್ತರಾರ್ಧದಲ್ಲಿ ರಗಣ ಮತ್ತು ಲಘು ಗುರು, ಇರಬೇಕು. ವೃತ್ತದ ಧಾಟಿಯಲ್ಲಿ ಓದಿದರೆ ಮಾತ್ರ ಇಲ್ಲಿ ವೃತ್ತ ಭಂಗವಾದದ್ದು ತಿಳಿಯುತ್ತದೆ. ಪದ್ಯವನ್ನು ಗದ್ಯದ ಹಾಗೆ ಓದಿದರೆ ಏನೂ ತಿಳಿಯುವುದಿಲ್ಲ. ಮೂಲದಲ್ಲಿ ಮಹಿಷಾಸು ಹಾರಿಣೌ (ಮಹಿಷ + ಅಸು + ಹಾರಿಣೌ) ಎಂಬುದು ತಿಳಿಯದೆ ಯಾರೋ ಇಲ್ಲಿ ರಕಾರ ಲುಪ್ತವಾಗಿದೆಯೆಂದು ಸೇರಿಸಿ 'ಮಹಿಷಾಸುರಹಾರಿಣೌ' ಎಂದು ಪರಿಷ್ಕರಿಸಿರಬೇಕು. ವಸ್ತುತಃ ಇದು ಮಹಿಷನ ಅಸು (ಪ್ರಾಣವನ್ನು) ಹಾರಿಣೌ ನಾಶಮಾಡಿದ ಚರಣಗಳು ಎಂಬ ಅರ್ಥವಿರುವ ಪದ. ಇಲ್ಲಿ ರಕಾರ ಸೇರಿಸಿದ್ದರಿಂದ ಅರ್ಥಕ್ಕೆ ಹಾನಿಯಿಲ್ಲದಿದ್ದರೂ ವೃತ್ತ ಭಂಗವಾಗಿ ಗತಿಕೆಡುತ್ತದೆ.

'ಕುಮಾರ ಸಂಭವ'ದ 'ದ್ವಿತೀಯ ಮೌರ್ವೀಮಿವ ಕಾರ್ಮುಕಸ್ಯ' ಎಂಬ ಪದ್ಯದಲ್ಲಿ ಅವಿಮೃಷ್ಟವಿಧೇಯಾಂಶ ದೋಷವಿದೆಯೆಂದು ಮುಮ್ಮಟ ಹೇಳಿದ್ದಾನೆ. ಆದರೆ ತಾಳೆಗರಿಯ ಪ್ರತಿಯಲ್ಲಿ 'ಮೌರ್ವೀಂ ದ್ವಿತೀಯಾಮಿವ ಕಾರ್ಮುಕಸ್ಯ' ಎಂಬ ಶುದ್ಧ ಪಾಠ ದೊರೆಯುತ್ತದೆಯೆಂದು ಚಾರುದೇವಶಾಸ್ತ್ರಿಗಳು ಹೇಳುತ್ತಾರೆ.

ಈಗ ಪ್ರಕಟಿತವಾದ ನಾರಾಯಣ ಪಂಡಿತಾಚಾರ್ಯರ ಶಿವಸ್ತುತಿಯಲ್ಲೂ ಕೆಲವು ಅಪಪಾಠಗಳಿವೆ. ತಾಳೆಗರಿಯ ಮೂಲ ಮಾತೃಕೆಯಲ್ಲಿ ಶುದ್ಧ ಪಾಠ ದೊರೆಯುತ್ತದೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಎಂದು ಶ್ರೀ ಬನ್ನಂಜೆ ಗೋವಿಂದಾಚಾರ್ಯರು ಒಮ್ಮೆ ಹೇಳಿದ್ದರು. ತಾಳೆಗರಿಯ ಪಾಠ ಚೆನ್ನಾಗಿದೆಯೆಂಬುದಕ್ಕೆ ಅವರು ಕೊಟ್ಟ ಉದಾಹರಣೆ—

ಈಗಿರುವ ಪಾಠ		ಶುದ್ಧ ಪಾಠ	
ಜಲಾಭಿರಚಲಾಭಿ ;	ಎಂಬುದು	ಚಲಾಭಿರಚಲಾಭಿಃ	ಎಂದಾಗಬೇಕು.
ಪುರತ್ರಿಪುರರಂಧನಂ	"	ಪುರುತ್ರಿಪುರರಂಧನಂ	"
ನಿವಾಸನಿಲಯಶ್ಶಿತಾ	"	ವಿಲಾಸ ನಿಲಯಶ್ಶಿತಾ	"
ಸದಾತ್ರಿನಯನೋ ಭವಾನ್ ವಹಸಿ	"	ಅಪಿತ್ರಿನಯನಃ ಸದಾ ವಹಸಿ	"

ಈ ಪಾಠಗಳಲ್ಲಿ ಸ್ವಾರಸ್ಯವೇನೆಂಬುದನ್ನು ಸಹೃದಯರಿಗೆ ಬೇರೆ ಹೇಳಬೇಕಿಲ್ಲ.

ಹಸ್ತಪ್ರತಿಗಳಲ್ಲೂ ಇರುವ ದೋಷಗಳು

ಲೇಖಕನ ಅವ್ಯುತ್ಪತ್ತಿ, ಮರೆವು, ಆಲಸ್ಯ, ಕೈತಪ್ಪು ಇತ್ಯಾದಿ ಕಾರಣಗಳಿಂದ ಹಸ್ತ ಪ್ರತಿಗಳಲ್ಲೂ ತುಂಬ ತಪ್ಪುಗಳು ನುಸುಳಿಕೊಳ್ಳುವುದುಂಟು. ಇದರ ಪರಿಣಾಮ ಎಲ್ಲಿಯ ವರೆಗೆ ಎಂದರೆ, ಒಂದೇ ಹಸ್ತಪ್ರತಿಯ ಆಧಾರದಿಂದ ಬರೆದ ಪ್ರಮಾಣಭೂತವಾದ ಕೃತಿಗಳಲ್ಲೂ ಆ ತಪ್ಪು ರೂಪಾಂತರಗೊಂಡು ಅಡಗಿರುತ್ತದೆ. ಅದಕ್ಕಾಗಿ ಪ್ರಕಟನ ಕಾರ್ಯದಲ್ಲಿ ಹತ್ತಾರು ಪ್ರತಿಗಳನ್ನು ನೋಡುವುದೊಳಿತು. ಎಲ್ಲ ಪ್ರತಿಗಳೂ ಒಂದೇ ಕಡೆ ಅಶುದ್ಧವಾಗಿರುವುದಿಲ್ಲ. ಒಂದರಲ್ಲಿ ಒಂದು ತಪ್ಪಿದ್ದರೆ ಅದೇ ಭಾಗ ಮತ್ತೊಂದು ಪ್ರತಿಯಲ್ಲಿ ಶುದ್ಧವಾಗಿರುತ್ತದೆ. ಈ ದೃಷ್ಟಿಯಿಂದಲೂ ಹಸ್ತಪ್ರತಿಗಳ ಆವಶ್ಯಕತೆ ಕಂಡು ಬರುತ್ತದೆ. ಪ್ರಸಿದ್ಧ ಕೋಶಕಾರ ಅಮರಸಿಂಹನ ವನೌಷಧಿವರ್ಗದಲ್ಲಿ ಖದಿರಮರದ ಪರ್ಯಾಯ ಪದಗಳನ್ನು ಹೇಳುವಾಗ—

ಗಾಯತ್ರೀ ಬಾಲತನಯಃ ಖದಿರೋ ದಂತಧಾವನಃ ।

ಎಂಬ ಪಾಠವಿದೆ. ಇದಕ್ಕೆ ಭಾನುಜೀದೀಕ್ಷಿತನ ಸುಧಾ ಟೀಕೆಯಲ್ಲಿ ಬಾಲಾಃ ತನಯಾಃ ಪತ್ರಾಣಿ ಯಸ್ಯ ಎಂಬ ವಿಗ್ರಹವಾಕ್ಯವೂ ಇದೆ. ಅಂದರೆ ಚಿಕ್ಕ ಚಿಕ್ಕ ಎಲೆಗಳುಳ್ಳ ಮರ ಎಂದರ್ಥ. ಆದರೆ ತನಯ ಎಂಬ ಪದಕ್ಕೆ ಎಲೆ ಎಂಬರ್ಥ ರೂಢಿಯಲ್ಲಿಲ್ಲ. ಖದಿರಕ್ಕೆ 'ಬಾಲಪತ್ರ' ಎಂಬ ಹೆಸರೂ ಇದೆ. ಅಮರಸಿಂಹನಿಗೆ ದೊರಕಿದ ಪ್ರತಿಯಲ್ಲಿ ಯಾರೋ ಪತ್ರ ಎನ್ನಬೇಕಾದಲ್ಲಿ ಪುತ್ರ ಎಂದು ಕೈತಪ್ಪಿನಿಂದ ಬರೆದಿರಬೇಕು. ಅದನ್ನು ಅಮರಸಿಂಹ ಇದ್ದಕ್ಕಿದ್ದ ಹಾಗೆ ವಿಮರ್ಶಿಸದೆ, 'ಬಾಲತನಯ' ಎಂದು ರೂಪಾಂತರಿಸಿರ ಬೇಕು ಎಂದು ಕ್ಷೀರಸ್ವಾಮಿಯ ಹೇಳಿಕೆ. 'ಬಾಲಪತ್ರೋ ಯವಾಸಃ ಖದಿರಶ್ಚ ಇತಿ ಪ್ರಾಂಚಃ ಎಂದು ಹೇಳಿದ್ದಾನೆ ದೀಕ್ಷಿತ. ಹೀಗೆ ಕೆಲವು ಅಪಾರ್ಥಕ್ಕೂ ಎಡೆಮಾಡಿ ಕೊಡುವ ಹಸ್ತ ಪ್ರತಿಗಳು ಬೇಕಾದಷ್ಟಿವೆ. (ಅದಕ್ಕಾಗಿ ಹಸ್ತಪ್ರತಿಗಳು ಸಂಗ್ರಹ ವಾದಷ್ಟೂ ಒಳಿತು).

ಇದಕ್ಕೆ ಕಾರಣ ಕಂಡುಹಿಡಿಯಲು ದೂರ ಹೋಗಬೇಕಾಗಿಲ್ಲ. ಹಿಂದೆ ವಿದ್ವಾಂಸರೆನಿಸಿ ಕೊಂಡವರು ಬರೆಯುವುದೇ ಕಡಮೆ. ಬರಿಯಲಿಕ್ಕೇ ಬಾರದ ಘನ ವಿದ್ವಾಂಸರೂ ಇಲ್ಲ ದಿಲ್ಲ. ಅವರಿಗೆ ಏನಿದ್ದರೂ ಎಲ್ಲ ಬಾಯಲ್ಲೆ. ಬರೆಯುವವರು ಹೆಚ್ಚಾಗಿ ವಿದ್ವಾಂಸರೇನಲ್ಲ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅವರಿಗೆ ತಿಳುವಳಿಕೆಯೂ ಸಾಮಾನ್ಯ. ಮುದ್ರಾರಾಕ್ಷಸ ನಾಟಕದಲ್ಲಿ ಚಾಣಕ್ಯ ಹೇಳುವ 'ಶ್ರೋತ್ರಿಯಾಕ್ಷರಾಣಿ ಅನುವಾಚ್ಯಾನಿ ಭವಂತಿ' ಎಂಬ ಮಾತಿನಲ್ಲಿ ವ್ಯಂಗ್ಯ ವಿಡಂಬನೆ ಇರುವಷ್ಟೇ ಸತ್ಯಾಂಶವೂ ಅಡಗಿದೆ. ದೊಡ್ಡ ಪಂಡಿತರೆನಿಸಿದವರು ಮಾತಿನಮಲ್ಲರಾಗಿದ್ದರೇ ಹೊರತು ಕಲಾನಿಪುಣರಾಗಿರಲಿಲ್ಲ. (ಇದಕ್ಕೆ ಕೆಲವೆಡೆ ಅಪವಾದವೂ ಇರಬಹುದು). ಬರಹವೂ ಒಂದು ಕಲೆ. ಬರೆಯುವವರದೇ ಒಂದು ವರ್ಗವಿತ್ತು. ಕರಣಿಕರು ಲಿಪಿಕಾರರೆಂದೇ ಹೆಸರುವಾಸಿಯಾಗಿದ್ದರು. ಅವರ ಶಾಸ್ತ್ರಪಾಂಡಿತ್ಯ ಹೇಗೇ ಇರಲಿ, ಬರವಣಿಗೆ ಮಾತ್ರ ನೋಡಲು ಮುದ್ದಾಗಿರುತ್ತಿತ್ತು. ಇವರು ಬರೆಹದಿಂದಲೇ ಬದುಕು ಸಾಗಿಸುತ್ತಿದ್ದರು. ಕೆಲವು ಬರಹಗಾರರ ಲಿಪಿ ನೋಡಲು ಚೆನ್ನಾಗಿದ್ದರೂ ಓದಲು ಸುಲಭವಲ್ಲದ ರೇಖಾವಿನ್ಯಾಸವೂ ಇತ್ತು. ಇದನ್ನು ಮೋಡಿ ಬರಹ (style) ಎನ್ನುತ್ತಿದ್ದರು. ಒಬ್ಬೊಬ್ಬರದೂ ಒಂದೊಂದು ತರ. ಕೆಲವರ ಲಿಪಿಯಲ್ಲಿ ಒಂದು ವಿಶಿಷ್ಟವಾದ ಅಕ್ಷರ ಯಾವುದೆಂದು ಗುರುತಿಸಲು ಆ ಅಕ್ಷರವಿರುವ ಹಲವಾರು ಪದಗಳನ್ನು ನೋಡಬೇಕು. ತೀರ ಮೋಡಿಯಾದಾಗ ಅದನ್ನು ಬ್ರಹ್ಮಲಿಪಿಯೆಂದು ತೆಗಳುವುದೂ ಇತ್ತು. ಆದರೆ ಈ ಬರಹಗಾರರಿಗೆ ತಾವು ಅರಿತವರೆಂಬ ಹಮ್ಮು ಬಿಮ್ಮು ಕಡಮೆ. ತಮ್ಮ ಬರವಣಿಗೆಯಲ್ಲಿ ಲೋಪದೋಷಗಳಿದ್ದರೆ ತಿದ್ದಿಕೊಂಡು ಓದಿ ಎಂದು ಗ್ರಂಥದ ಕೊನೆಯಲ್ಲಿ, ಅವರವರದೇ ಆದ ಶೈಲಿಯಲ್ಲಿ ವಿನಂತಿಸಿಕೊಳ್ಳುತ್ತಿದ್ದರು. ಸಮಾಜದಲ್ಲೂ ವಿದ್ವಾಂಸರಿಗಿಂತ ಇವರ ಸ್ಥಾನ ಸ್ವಲ್ಪ ಕೆಳಗಿರುತ್ತಿತ್ತು. ಬರಹಗಾರರ ವಿನಂತಿಗಳಲ್ಲಿ ಕೆಲವು ಸ್ವಾರಸ್ಯವಿತ್ತು. ಮಾದರಿಗಾಗಿ ಕೆಲವು ಪುಷ್ಪಿಕೆಗಳನ್ನು (colophone) ಇಲ್ಲಿ ಕೊಡಲಾಗಿದೆ. ಇದರಿಂದ ಅವರು ಎಷ್ಟು ಪ್ರಾಮಾಣಿಕರೂ ತಾವು ಬರೆದ ಪುಸ್ತಕದ ಬಗೆಗೆ ಅಭಿಮಾನವುಳ್ಳವರೂ ಆಗಿದ್ದರೆಂಬುದನ್ನು ತಿಳಿಯಬಹುದು. ಈ ಪುಷ್ಪಿಕೆಗಳು ಹೆಚ್ಚಾಗಿ ಸಂಸ್ಕೃತದಲ್ಲಿವೆ. ಕೆಲವೆಡೆ ಕನ್ನಡದಲ್ಲೂ ಸಿಗುತ್ತವೆ.

(ಸಂಸ್ಕೃತ)

೧ ಸ್ವಾರ್ಥಂ ಪರೋಪಕೃತ್ಯರ್ಥಮಪ್ಯಲೇಖಿ ಮಯಾ ಬುಧಾ ।
ಪಾಲನೀಯ ಮಿತಃ ಸದ್ಭಿಃ ಭವದ್ಭಿರಿದ ಮಾದರಾತ್ ॥

೨ ಯಾದೃಶಂ ಪುಸ್ತಕಂ ದೃಷ್ಟ್ವಾ ತಾದೃಶಂ ಲಿಖಿತಂ ಮಯಾ ।
ಯದಿ ಶುದ್ಧಮಶುದ್ಧಂ ವಾ ಮಮದೋಷೋ ನ ವಿದ್ಯತೇ ॥

ಕೆಲವರು ಈ ಶ್ಲೋಕವನ್ನೇ ಸ್ವಲ್ಪ ಬದಲಾಯಿಸಿ,

೩ ಸುಬದ್ಧಂ ಪುಸ್ತಕಂ ದೃಷ್ಟ್ವಾ ಅಬದ್ಧಂ ಲಿಖಿತಂ ಮಯಾ ।

ಎಂದೂ ಹೇಳಿಕೊಂಡಿದ್ದಾರೆ.

೪ ಬಿಂದು ದುರ್ಲಿಪಿ ವಿಸರ್ಗ ವೀಥಿಕಾ । ಶೃಂಗ ಪಂಕ್ತಿಪದಭೇದದೂಷಣಮ್ ।
ಹಸ್ತವೇಗಜಮಬುದ್ಧಿಪೂರ್ವಕಂ । ಕ್ಷಂತುಮರ್ಹತಿ ಸಮೀಕ್ಷ್ಯ ಸಜ್ಜನಃ ॥

೫ ಪ್ರತಿಸದೃಶಮಶೇಷಂ ಪ್ರೋಜ್ವಲಂ ಪತ್ರಿಕಾಸು
ಪ್ರತಿವಿಲಿಖಿತ ಮೇತತ್ ಯನ್ಮಯಾ ಮಂದಬುದ್ಧ್ಯಾ ।

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ತದಖಿಲಮಪಿ ದೃಷ್ಟ್ವಾ ಸಾಧುವ್ಯಾಸಾಧುವೇತಿ
ಕರಕೃತಮಪರಾಧಂ ಕ್ಷಂತುಮರ್ಹಂತಿ ಸಂತಃ ॥

೬ ಆರ್ಜಿತಂ ಭೂರಿಯತ್ನೇನ ಲಿಖಿತಂ ಪುಸ್ತಕಂ ಮಯಾ ।
ಹರ್ತುಮಿಚ್ಛತಿ ಯಃ ಪಾಪೀ ತಸ್ಯ ವಂಶಕ್ಷಯೋ ಭವೇತ್ ॥

೭ ಅಕ್ಷರಂ ಯತ್ಪರಿಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ಕ್ಷಂತು ಮರ್ಹಂತಿ ವಿದ್ವಾಂಸಃ ಪಿತಾ ಪುತ್ರಾಪರಾಧವತ್ ॥

೮ ಪುಸ್ತಕಸ್ಯಾಸ್ಯ ನೇತಾರಃ ಚೌರ್ಯಬುದ್ಧ್ಯಾ ನರಾಧಮಾಃ ।
ತೇ ಸರ್ವೇ ನಿರಯಸ್ಥಾಃ ಸ್ಯುಃ ಪ್ರತಿಜನ್ಮ ನಿರಕ್ಷರಾಃ ॥

೯ ಬಾಲಪಾಠಸುಖಸಾಧನೀಯತಾ ಮಿಚ್ಛತಾ ಕೃತವತಾರ ಸಂಗ್ರಹಂ ।
ಶ್ರಾದ್ಧಪದ್ಧತಿರಿಯಂ ಹರೇರ್ಮುದೇ ಕೇಶವೇನ ಲಿಖಿತಂ ಸಮಾಪ್ತಿಮೈತ್ ॥

೧೦ ತೈಲಾದ್ರಕ್ಷೇತ್ ಜಲಾದ್ರಕ್ಷೇತ್ ರಕ್ಷೇತ್ ಶಿಥಿಲಬಂಧನಾತ್ ।
ಮೂರ್ಖಹಸ್ತೇ ನ ದಾತವ್ಯಮಿತಿ ರೋದಿತಿ ಪುಸ್ತಕಮ್ ॥

೧೧ ಭಗ್ನಪೃಷ್ಠ ಕಟಿಗ್ರೀವಃ ಸ್ತಬ್ಧದೃಷ್ಟಿರಧೋಮುಖಃ ।
ಕಷ್ಟೇನ ಲಿಖಿತಂ ಗ್ರಂಥಂ ಯತ್ನೇನ ಪರಿಪಾಲಯ ॥

(ಕನ್ನಡ)

೧೨ ತಪ್ಪಂ ಬರದಾತಂ ಕಡುಜಡ
ನಪ್ಪಾತನೆಂದು ಅವನಂ ಬಯ್ಯಲ್ ಬೇಡ ।
ತಪ್ಪಕ್ಕು ಶುದ್ಧಮಕ್ಕುಂ
ತಪ್ಪುಳ್ಳೊಡೆ ತಿದ್ದಿಕೊಂಬುದುತ್ತಮ ಪುರುಷರ್ ॥

೧೩ ಈ ಪುಸ್ತಕವನ್ನು ಓದುವಂತಾ ಮಹನೀಯರು ತಪ್ಪುಯಿದ್ದರೆ ತಿದ್ದಿಕೊಳ್ಳುವುದು.

ಇವಲ್ಲದೆ ಇನ್ನೂ ಹಲವು ತರದ ಸಮಾಪ್ತಿ ವಾಕ್ಯಗಳು ಕಾಣಬರುತ್ತವೆ. ಕೆಲವರು ಕೊನೆಯಲ್ಲಿ ಸಂವತ್ಸರದ ಮಾಸ ಪಕ್ಷ ತಿಥಿ ವಾರಗಳನ್ನು ತಿಳಿಸಿ ಬರೆದವನ ಹೆಸರು, ಬರೆದ ಕಾರಣ, ಯಾರಿಗೆ ಬರೆದು ಕೊಟ್ಟದ್ದು, ತನಗೇನು ಪ್ರತಿಫಲ ಸಿಕ್ಕಿದೆ ಎಂದೆಲ್ಲಾ ಬರೆಯುವುದುಂಟು (ಶಾ. ಶಕವನ್ನು ಬರೆದುದು ತೀರ ಅಪೂರ್ವವಾಗಿ ಸಿಗುತ್ತದೆ). ಇಂತಹ ಸಮಾಪ್ತಿ ವಾಕ್ಯಗಳಿಂದ ಗ್ರಂಥದ ವಯಸ್ಸನ್ನೂ ತಿಳಿಯಬಹುದು. ಅಲ್ಲದೆ ಆಗಿನವರ ರುಚಿ, ಶುದ್ಧಿ, ಸಂಸ್ಕೃತಿ ಮುಂತಾದುವನ್ನೂ ತಿಳಿಯಲು ಸಾಧ್ಯ.

ಗ್ರಂಥ ಗೌರವ

ನಮ್ಮಲ್ಲಿ ತಾಳೆಗರಿಯ ಗ್ರಂಥಗಳಿಗಿದ್ದಷ್ಟು ಗೌರವ, ಮಹತ್ವ ಕಾಗದದ ಪುಸ್ತಕಗಳಿಗಿದ್ದಿಲ್ಲ. ಈಗಲೂ ಕೆಲವರ ಮನೆಗಳಲ್ಲಿ ತಾಡವಾಲೆ ಪುಸ್ತಕವನ್ನು ದೇವರ ಕೋಣೆಯಲ್ಲಿಟ್ಟು ಪೂಜಿಸುವ ಪದ್ಧತಿ ಇದೆ. ನವರಾತ್ರಿ ಕಾಲದಲ್ಲಿ ಶಾರದಾ ಪೂಜೆ (ವ್ಯಾಸಪೂಜೆ) ಯನ್ನು ಮಾಡುವುದೂ ತಾಡವಾಲೆಯ ಗ್ರಂಥಗಳಿಗೇ ಮೀಸಲು. ಕೆಲವರು ಮಡಿವಂತರು ಪಾರಾಯಣ ಮಾಡಲೂ ತಾಡಪ್ರತಿಯನ್ನೇ ಬಯಸುತ್ತಾರೆ. ಇದು ಬ್ರಾಹ್ಮಣೇತರರಲ್ಲೂ ನಡೆದು ಬಂದಿತ್ತು ಎಂಬುದಕ್ಕೆ ಒಂದು ಘಟನೆಯನ್ನು ಉಲ್ಲೇಖಿಸುತ್ತೇನೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಾನು ಪೂರ್ಣಪ್ರಜ್ಞ ಕಾಲೇಜಿನಲ್ಲಿ ಪ್ರಾಧ್ಯಾಪಕನಾಗಿದ್ದಾಗ, ನಮ್ಮ ಸಹೋದ್ಯೋಗಿ ಪ್ರೊ॥ ಹೆಚ್. ಶಿವರಾಮ ಶೆಟ್ಟರು ಒಂದು ದಿನ ಎರಡು ತಾಡವಾಲೆ ಗ್ರಂಥಗಳನ್ನು ತಂದು ನನಗೆ ತೋರಿಸಿ, 'ಆಚಾರ್ಯರೆ, ಇವು ಏನು ನೋಡಿರಿ, ಇದು ನಮ್ಮ ಮಾವಂದಿರ ಆಸ್ತಿ. ಅವರೀಗ ಅಸ್ವಾಸ್ಥ್ಯದಲ್ಲಿದ್ದಾರೆ. ಮನೆಯಲ್ಲಿ ಹೆಂಗಸರೋ ಮಕ್ಕಳೋ ಯಾರಾದರೂ ತಿಳಿಯದೆ ಇವನ್ನು ಬೆಂಕಿ ಉರಿಸಲು ಒಲೆಗೆ ಹಾಕಿದರೇನು ಗತಿ ? ಎಂದು ತಂದಿದ್ದೇನೆ. ಇದು ನಿಮ್ಮ ವಶದಲ್ಲಿರಲಿ. ನಿಮಗೆ ಉಪಯುಕ್ತ ಎಂದು ಕಂಡರೆ ಇಟ್ಟುಕೊಳ್ಳಿ' ಎಂದು ನನಗೆ ಒಪ್ಪಿಸಿದರು. ಅದು ಒಂದು 'ಜೈಮಿನಿ ಭಾರತ'ದ, ಮತ್ತೊಂದು 'ತೊರವೆ ರಾಮಾಯಣ'ದ ಪ್ರತಿಗಳು. ನೋಡುವಾಗ ಮುದ್ದಾದ ಲಿಪಿ, ಸ್ವಲ್ಪವೂ ತ್ರುಟಿತವಾಗದೆ ಚೆನ್ನಾಗಿತ್ತು ಪ್ರತಿ. ಆ ರೀತಿ ಅವನ್ನು ಜೋಪಾನವಾಗಿಟ್ಟಿದ್ದರು. ಗ್ರಂಥದ ಕೊನೆಯಲ್ಲಿ ಬರೆದವನ ಹೆಸರು ಕಾಲ ಇತ್ಯಾದಿ ದಾಖಲೆಯೂ ಇತ್ತು. ಸರಿ, ಇರಲಿ ಎಂದು ನನ್ನ ಬಳಿಯಿಟ್ಟುಕೊಂಡೆ. ಕೆಲವು ತಿಂಗಳು ಕಳೆಯಿತು. ಒಮ್ಮೆ ಪುನಃ ಅವರೇ ಬಂದು "ಆಚಾರ್ಯರೇ! ಆ ಪುಸ್ತಕ ಹಿಂದಕ್ಕೆ ಕೊಡಿರಿ. ನಮ್ಮ ಮಾವಂದಿರು ಈಗ ರೋಗಮುಕ್ತರಾಗಿ ಮೊದಲಿನ ಸ್ಥಿತಿಗೆ ಬಂದಿದ್ದಾರೆ. ಮೊನ್ನೆ ನನ್ನ ಪಾರಾಯಣ ಪುಸ್ತಕವೆಲ್ಲಿ ಎಂದು ನನ್ನನ್ನು ಕೇಳಿದರು. ನಾನು ಅದನ್ನು ನಿಮಗೆ ಕೊಟ್ಟ ವಿಚಾರ ತಿಳಿಸಿದೆ. ಅದಕ್ಕವರು, ಅಸಹನೆಯಿಂದ, 'ಛೆ ಅನ್ಯಾಯ ! ನಾನು ದಿನಾಲೂ ಪಾರಾಯಣ ಮಾಡುವ ಪುಸ್ತಕವದು. ನಾನು ಅದರಲ್ಲೇ ಓದುವುದು (ಮುದ್ರಿತ ಗ್ರಂಥ ಬೇಡ). ಊಟಕ್ಕೆ ಮೊದಲು ಒಂದು ಸಂಧಿಯನ್ನಾದರೂ ಓದುವಂಥಾದ್ದು ನನ್ನ ನಿಯಮ. ಅದಿಲ್ಲದೆ ನಾನು ಊಟ ಮಾಡಲಾರೆ. ನೀವು ಆಧುನಿಕರು ! ನಿಮಗೇನು ಗೊತ್ತು ಆ ಗ್ರಂಥದ ಮಹಿಮೆ. ಆ ಗ್ರಂಥ ಮನೆಯಲ್ಲಿದ್ದರೆ ಲಕ್ಷ್ಮೀವಾಸ ಎಂದು ನನ್ನ ನಂಬಿಕೆ, ಹೇಗೂ ಇರಲಿ ಆಯಿತಲ್ಲ. ಅವನ್ನು ಹಿಂದಕ್ಕೆ ತಂದುಕೊಡು' ಎಂದು ಹೇಳಿದರು ಮಾರಾಯ್ರೆ ! ಈಗ ನಾನು ಸಿಕ್ಕಿಬಿದ್ದೆ. ದಯಮಾಡಿ ಹಿಂದಕ್ಕೆ ಕೊಡಿ. ಅದರಲ್ಲೇನಿದೆ ಎಂದು ತಿಳಿಸಿ" ಎಂದರು. ನಾನು ನಕ್ಕು ಅವು ಭಾರತ, ರಾಮಾಯಣಗಳೆಂದು ತಿಳಿಸಿ ಅವನ್ನು ಹಿಂದಿರುಗಿಸಿದೆ. ಇಲ್ಲಿನ ಘಟನೆ ತೀರ ಸಾಮಾನ್ಯ. ಆದರೆ ಅದರ ಹಿಂದಿರುವ ಸಾಂಸ್ಕೃತಿಕ ಮೌಲ್ಯ ಎಂಥದೆಂಬುದನ್ನು ಯಾರೂ ಅರಿಯಬಹುದು. ಈಗ ಇಂಥಾ ಭಾವನೆ ನಾಗರಿಕ, ಸಭ್ಯರೆನಿಸಿಕೊಂಡವರಲ್ಲಿ ಕಡಿಮೆಯಾಗುತ್ತಿರುವುದರಲ್ಲಿ ಅಚ್ಚರಿಯೇನಿಲ್ಲ, ಖೇದ ಮಾತ್ರವಿದೆ. ಈಗ ಎಷ್ಟೋ ಮನೆಗಳಲ್ಲಿ ತಾಡವಾಲೆ ಗ್ರಂಥಗಳು ಗೆದ್ದಲಿನ ಪಾಲಾಗಿ ಹೋಗುತ್ತಿವೆ. ಅವುಗಳಲ್ಲಿ ಎಷ್ಟು ಅಪೂರ್ವ ವಿಷಯಗಳಿವೆಯೋ ಯಾರಿಗೆ ಗೊತ್ತು. ಅದನ್ನು ಓದುವ ತಾಳ್ಮೆಯಾದರೂ ಯಾರಿಗಿದೆ ? ಈ ವಿಜ್ಞಾನ ಯುಗದಲ್ಲಿ ಅವುಗಳಿಂದ ಪ್ರಯೋಜನವಾದರೂ ಏನು ? ಎಂದು ಕಾಣಬಹುದು. ಶ್ರೀಮಂತರಾದ ಕೆಲವರ ಮನೆಯಲ್ಲಿ ಸ್ಯಾಂಪಲ್‌ಗಾಗಿ ಕೆಲವು ತಾಡವಾಲೆ ಗ್ರಂಥವಿರುವುದುಂಟು. ಏಕೆಂದರೆ ವಿದೇಶೀಯರು ಬಂದರೆ ಅವರು ತಾಡವಾಲೆ ನೋಡಲು ಹಂಬಲಿಸುತ್ತಾರೆ. ನಮ್ಮ ಆಧುನಿಕ ಸೌಕರ್ಯಗಳು ಅವರಿಗೆ ಕಃಪದಾರ್ಥ. ಈ ಸಲಕರಣೆಗಳು ಅವರಿಗೆ ಬೇಕಿಲ್ಲ. ತಾಡವಾಲೆಗಳನ್ನು ತೋರಿಸಿದರೆ ಅವರು ಬಹಳ ಖುಶಿಪಡುತ್ತಾರೆ. ಹೀಗಾಗಿ ತಾವು ಓದದಿದ್ದರೂ ಬೇರೆಯವರಿಗೆ ತೋರಿಸುವ ಸಲುವಾಗಿ ಅವನ್ನು ರಕ್ಷಿಸಿಡುವ ಪದ್ಧತಿ ಬಂದಿದೆ. ವಿದೇಶೀಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಿಂದಾದರೂ ನಮ್ಮ ತಾಡವಾಲೆ ಪ್ರತಿಗಳ ಬಗೆಗೆ ನಮಗೆ ಆದರ ಬುದ್ಧಿಯುಂಟಾಯಿತಲ್ಲ ಎಂದು ಹೆಮ್ಮೆಪಡಬೇಕೆ ?

ತಾಡವಾಲೆ ಗ್ರಂಥಗಳ ವೈಶಿಷ್ಟ್ಯ

ಇವು ಮುದ್ರಿತ ಪ್ರತಿಗಳ ಹಾಗಲ್ಲ. ಛಂದೋಬದ್ಧವಾದ ಕೃತಿಗಳನ್ನು ಪಾದಭೇದ ಮಾಡದೆ ಉದ್ದಕ್ಕೆ ಬರೆದುಕೊಂಡು ಹೋಗುವುದಿದೆ. ಕೆಲವು ಆಲೇಖ(ಹಾಳೆ)ಗಳು ಸುಮಾರು ೨॥ ಅಡಿಗಿಂತಲೂ ಉದ್ದ, ಸುಮಾರು ೩ ಇಂಚಿನವರೆಗೂ ಅಗಲವಾಗಿರುತ್ತವೆ. ಹಾಳೆಯ ಒಂದು ಬದಿ ಹಿಡಿಯುವಾಗ ಮತ್ತೊಂದು ಬದಿ ಕೆಳಗೆ ಜೋಲುತ್ತದೆ. ಇಷ್ಟಾದರೂ ಹಾಳೆ ಮುರಿಯುವುದಿಲ್ಲ, ಹದಮಾಡಿದ ಹಳೆಯ ವಾಲೆಗೆ ಫಕ್ಕನೆ ಬೆಂಕಿಯೂ ಹತ್ತುವುದಿಲ್ಲ. ಬರೆಯುವ ಮೊದಲು ಆ ವಾಲೆಗಳನ್ನು ಬಿಸಿನೀರಲ್ಲಿ ಚೆನ್ನಾಗಿ ಬೇಯಿಸಿ ಅದು ಮಡಚಿದರೂ ಮುರಿಯದ ಹಾಗೆ ಹದ ಮಾಡಿರುತ್ತಾರೆ. ಆದ್ದರಿಂದ ಚೂಪಾದ ಕಂಠದಿಂದ ಅದರ ಮೇಲೆ ಕೊರೆದು ಬರೆಯುವಾಗ ತೂತು ಆಚೆ ಬದಿ ಏಳುವುದಿಲ್ಲ. ಹಾಳೆಗಳನ್ನು ಒಂದೇ ಅಳತೆಯಲ್ಲಿ ಕತ್ತರಿಸಿ ಮಧ್ಯ ಒಂದೋ ಎರಡೋ (ಅಗಲವನ್ನು ಹೊಂದಿಕೊಂಡು) ತೂತು ಕೊರೆದು, ಹಾಳೆಗಳನ್ನು ಕ್ರಮವಾಗಿ ಹೊಂದಿಸುವಂತೆ ನೂಲನ್ನು ಸುರಿದಿರುತ್ತಾರೆ. ಪವಿತ್ರ ಗ್ರಂಥಗಳಿಗೆ ವಿಸರ್ಜನೆ ಮಾಡಿದ ಅನಂತನ ದಾರವೇ ಶ್ರೇಷ್ಠ. ಬರೆಯುವಾಗ ಪ್ರತಿಸಾಲಿಗೂ ಇಕ್ಕಡೆಗಳಲ್ಲಿ ಅಥವಾ ಒಂದೇ ಕಡೆ ಕ್ರಮಸಂಖ್ಯೆ ಇರುವುದಿದೆ. ಅಂದರೆ ಸುದೀರ್ಘವಾದ ಒಂದು ಸಾಲು ಓದಿ ಮುಗಿಸಿ ಮತ್ತೊಂದು ಸಾಲಿಗೆ ಬರುವಾಗ ಯಾವ ಸಾಲು ಎಂದು ತಿಳಿಯಲು ಇದು ಸುಲಭವಾಗುತ್ತದೆ. ಪ್ರತಿ ವಾಲೆಗೂ ಆಲೇಖ ಸಂಖ್ಯೆ ಬೇರೆ ಇರುತ್ತದೆ. ಸಣ್ಣ ಪುಸ್ತಕವಾಗಿದ್ದರೆ ಕೆಲವೆಡೆ ಅ, ಆ, ಇ, ಈ....ಕ. ಖ, ಗ, ಘ ಹೀಗೆ ಅಕ್ಷರ ಕ್ರಮದಲ್ಲಿ ವಾಲೆಗಳ ಸಂಖ್ಯೆ ಸೂಚಿಸುವುದೂ ಇದೆ. ಕಂಠದಿಂದ ವಾಲೆಯಲ್ಲಿ ಬರೆದ ಬಳಿಕ ಸಹದೇವಿ ಸೊಪ್ಪಿನ ರಸದಿಂದಲಾಗಲಿ, ಹೊಂಗರಕನ ಸೊಪ್ಪಿನ ರಸದಿಂದಾಗಲಿ, ವಾಲೆಗಳನ್ನು ಒರೆಸಿದಾಗ ಆ ರಸವು ಕಂಠ ಮೂಡಿಸಿದ ರೇಖೆಗಳಲ್ಲಿಳಿದು ಶಾಯಿಹಾಕಿದಂತೆ ಅಕ್ಷರಗಳು ಸ್ಫುಟವಾಗಿ ಕಪ್ಪಾಗಿ ಕಾಣುತ್ತವೆ. ಅಲ್ಲದೆ ಈ ರಸದ ಘಾಟಿನಿಂದಾಗಿ ವಾಲೆಗಳಿಗೆ ಹುಳಕುಟ್ಟೆ ಮುಟ್ಟುವುದಿಲ್ಲ. ರಾಮಾಯಣ, ಭಾರತದಂತಹ ದೊಡ್ಡ ಗ್ರಂಥವಾದರೆ ಸಂಧಿಯೋ ಅಧ್ಯಾಯವೋ ಮುಗಿಯುವ ವಾಲೆಯ ಎಡಬದಿಯಲ್ಲಿ (ಅಂದರೆ ನಮಗೆ ಎಡ ಬದಿ) ಶ್ರೀ ಕಾರ ಬರೆಯುವುದುಂಟು. ಅಲ್ಲದೆ ಆಯಾ ವಿಚಾರವನ್ನು ಸೂಚಿಸುವುದೂ ಇದೆ. ವಾಲೆಯ ಕಟ್ಟುಗಳಿಗೆ ಮರದ ಕವಚವಿರುತ್ತದೆ. ಕೆಲವೊಮ್ಮೆ ಆ ಕವಚಗಳಲ್ಲಿ ಅಂದವಾದ ಕೆತ್ತನೆ ಕೆಲಸದ ಚಿತ್ರಗಳೂ ಇರುತ್ತವೆ. ಕೆಲವೆಡೆ ವಾಲೆಗಳಲ್ಲೇ ಅಂದವಾದ ರೇಖಾಚಿತ್ರಗಳೂ ಇರುವುದುಂಟು. ಅವುಗಳಿಗೆ ಅಪೂರ್ವವಾಗಿ ವರ್ಣ ಸಂಸ್ಕಾರವಿರುವುದೂ (ಬಣ್ಣ ಹಾಕಿದ್ದು) ಕೆಲವೆಡೆ ಕಾಣಸಿಗುತ್ತದೆ. ಈಗಿನ ಮುದ್ರಿತ ಪುಸ್ತಕದಲ್ಲಿ ಯಾವುದೋ ಒಂದು ವಿಷಯ ಮಾತ್ರವಿರುವುದು ಹೆಚ್ಚು. ಆದರೆ ಹಳೆಯ ತಾಡವಾಲೆಯ ಪ್ರತಿಗಳಲ್ಲಿ ಒಂದೇ ಗ್ರಂಥದಲ್ಲಿ ಒಂದು ವಿಷಯದೊಡನೆ, ಅಲ್ಲಲ್ಲಿ ಹಲವಾರು ಮಾಹಿತಿಗಳೂ ದೊರೆಯುತ್ತವೆ. ಅಂತಹ ಮಾಹಿತಿಗಳು ಈಗ ಮುದ್ರಿತಗ್ರಂಥಗಳಲ್ಲಿ ದೊರೆಯುವುದಿಲ್ಲ. ಒಂದು ಷೋಡಶ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಂಸ್ಕಾರ ಗ್ರಂಥವೆಂದಿಟ್ಟುಕೊಳ್ಳೋಣ. ಇದರಲ್ಲಿ ಅಲ್ಲಲ್ಲಿ ಬಿಡುವಾಲೆಗಳಲ್ಲಿ ಮಂತ್ರ ಹೇಳುವಾಗ ಎಂಜಲಾಗುತ್ತದಲ್ಲ ಅದಕ್ಕೇನು ಪ್ರಾಯಶ್ಚಿತ್ತ, ಸಂತೆಯಲ್ಲಿ ಮುಟ್ಟಾದವರು ಸೋಂಕಿದರೆ ಏನು ಮಾಡಬೇಕು, ಕಾಕರುತ ಫಲ, ಗರುಡದರ್ಶನ ಫಲ, ಇತ್ಯಾದಿ ಅಪೂರ್ವ ಮಾಹಿತಿ ದೊರೆಯುತ್ತದೆ. ಗಡಿಯಾರವಿಲ್ಲದಿರುವ ಕಾಲ, ಆಗ ರಾತ್ರಿ ಹೊತ್ತಿನಲ್ಲಿ ಖಮಧ್ಯದಲ್ಲಿರುವ (ನಡುನೆತ್ತಿಯ ಮೇಲಿರುವ) ನಕ್ಷತ್ರ ನೋಡಿಕೊಂಡೇ ಲಗ್ನ ತಿಳಿಯುವ ಬಗೆ, ಗಣಿತದ ಕೆಲವು ಸುಲಭ ಸೂತ್ರಗಳು, ಶಕುನಫಲ, ಮನೆಮದ್ದು, ಕಾಹಿಲೆಗೆ ಪಥ್ಯ ಇತ್ಯಾದಿ ಹತ್ತಾರು ಮಾಹಿತಿಗಳಿರುತ್ತವೆ. ಇವನ್ನೆಲ್ಲ ಒಂದೊಂದಾಗಿ ನೋಡಲು ತಾಳ್ಮೆ ಬೇಕು. ನಾವು ನೋಡಲಿ ನೋಡದೆ ಇರಲಿ, ಈ ಗ್ರಂಥಗಳ ಸಂಗ್ರಹದಲ್ಲಿ ಇಂತಹ ಅಪೂರ್ವ ವಿಚಾರಗಳು ಸಿಗುತ್ತವೆಯೆಂದಾದರೂ ತಿಳಿದಿರುವುದು ಒಳಿತಲ್ಲವೆ ? ಅವು ಮರೆಯಾದರೆ ಮತ್ತೆ ನಮಗೆ ಸಿಗಲಾರದಲ್ಲವೆ ?

8285

ಗ್ರಂಥ ಸಂಗ್ರಹ ಮತ್ತು ರಕ್ಷಣೆ

ನಮ್ಮ ಊರಲ್ಲಾಗಲಿ ಪರವೂರಲ್ಲಾಗಲಿ ಕೆಲವು ಹಳೆಯ ಮನೆತನದ ಮನೆಗಳಲ್ಲಿ ಈಗ ತಾಡವಾಲೆಗ್ರಂಥಗಳು ಮುಸಿಹಿಡಿದು, ಧೂಳುನುಂಗಿ, ಕ್ರಮೇಣ ಗೆದ್ದಲಿನ ಬಾಯಿಗೆ ತುತ್ತಾಗುತ್ತಾ ಇವೆ. ಇವುಗಳಲ್ಲಿ ಕೆಲವಾದರೂ ಅಪೂರ್ವ, ಅಪ್ರಕಟಿತ ಗ್ರಂಥಗಳೂ ಇರಬಹುದು. ನಾನು ನೋಡಿದಂತೆ, ಭಾರತ ಸಾವಿತ್ರೀ, ಚಮತ್ಕಾರ ಚಿಂತಾಮಣಿ (ಒಂದು ಚಿಕ್ಕ ಜ್ಯೋತಿಷ್ಯ ಗ್ರಂಥ), ಇತಿಹಾಸ ಸಮುಚ್ಚಯ (ನಾರದ ಪುಂಡರೀಕ ಸಂವಾದ ರೂಪದಲ್ಲಿ ೩೨ ಪುರಾಣ ಪುರುಷರ ಚರಿತ್ರೆ), ಮುಹೂರ್ತ ಪದವೀ (ಕನ್ನಡ ವ್ಯಾಖ್ಯಾನ), ಋಗ್ವೇದ ವರ್ಣಕ್ರಮಲಕ್ಷಣ, ಶಮಾನ (ಇವೆರಡು ವೈದಿಕಗ್ರಂಥಗಳು), ಮಂತ್ರ ತಂತ್ರ ಯಂತ್ರಗಳ ಪ್ರಯೋಗ, ದೇವೀಮಹಾತ್ಮೆ (ಕನ್ನಡ ಕಾವ್ಯ, ಭಾಮಿನೀ ಷಟ್ಪದಿ), ಪ್ರಹ್ಲಾದ ಭಾರತ (ನರಹರಿಕವಿ ವಿರಚಿತ) ಮುಂತಾದ ಅನೇಕ ಗ್ರಂಥಗಳು ಇನ್ನೂ ಪ್ರಕಟವಾಗಿಲ್ಲವೆಂದು ತೋರುತ್ತದೆ. ಪ್ರಹ್ಲಾದ ಭಾರತವು ಭಾರತವೆಂದಿದ್ದರೂ ಇದು ಭಾಗವತದ ಪ್ರಹ್ಲಾದನ ಕತೆ. ಮೊದಲು ಇದು ಐಗಳ ಮಠದಲ್ಲಿ ಹೇಳಿಕೊಡುತ್ತಿದ್ದಿರಬಹುದು. ಏಕೆಂದರೆ ಇದರ ಕೆಲವು ಪದ್ಯಗಳು ಇನ್ನೂ ಹಳಬರ ಬಾಯಲ್ಲಿದೆ. ಇಂತಹ ಗ್ರಂಥಗಳು ಸಂಗ್ರಾಹ್ಯ. ಅಲ್ಲದೆ ಪ್ರಕಟಿತವಾದ ಗ್ರಂಥಗಳಲ್ಲೂ ಹಳೆಯಪ್ರತಿಯಲ್ಲಿ ಸಂಗ್ರಾಹ್ಯವಾದ ಪಾಠಭೇದ ದೊರೆಯುತ್ತದೆ. ಲಿಂಗಯ್ಯ ಸೂರಿಯ ಅಮರ ಕೋಶ ವ್ಯಾಖ್ಯಾನದಲ್ಲಿ ಈಗ ಉಪಲಬ್ಧವಿಲ್ಲದ ಅನೇಕ ಹೊಸಪಾಠಗಳಿವೆ. ಇವನ್ನೆಲ್ಲ ಸಂಗ್ರಹಿಸಬೇಕು. ಸಂದರ್ಭ ಬಂದಾಗ ಪ್ರಕಟಿಸಿದರೆ ಮುಂದಿನವರಿಗೆ ಬಹಳ ಪ್ರಯೋಜನವಾದೀತು. ಇಂತಹ ಗ್ರಂಥಗಳನ್ನು—ಹೋದದ್ದು ಹೋಯಿತು—ಇನ್ನಾದರೂ ರಕ್ಷಿಸಿಕೊಳ್ಳಬೇಕು. ಇವನ್ನು ಬರೆಯಲು ನಮ್ಮ ಹಿರಿಯರು ಎಷ್ಟೊಂದು ಶ್ರಮಪಟ್ಟಿದ್ದರು ಎಂದು ನೆನೆದರೆ, ಅವರ ಸಮಾಪ್ತಿ ವಾಕ್ಯಗಳನ್ನು ನೋಡಿದರೆ ಕಣ್ಣು ಮಂಜಾಗುತ್ತದೆ. ನಾವು ಎಂತಹ ನಿಧಿಯನ್ನು ಕಡೆಗಣಿಸುತ್ತಿದ್ದೇವೆ ಎಂಬುದು ನಮಗೇ ಅರಿವಿಲ್ಲ. ಆಧುನಿಕತೆಯ ಗುಂಗಿನಲ್ಲಿ ನಾವು ಎಲ್ಲವನ್ನೂ ಕಳೆದುಕೊಳ್ಳುತ್ತಿದ್ದೇವೆ. ಈ ಗ್ರಂಥಗಳನ್ನು ರಕ್ಷಣೆಮಾಡಲೂ ಕಷ್ಟವಿದೆಯೆಂಬುದು ಬರೆದವರಿಗೂ ತಿಳಿದಿತ್ತು. ಹೇಗೆ ಗ್ರಂಥಗಳನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಕ್ಷಿಸಬೇಕು ಎಂದೂ ಅವರು ಕೆಲವೆಡೆ ಹೇಳಿರುವುದುಂಟು.

ತೈಲಾದ್ರಕ್ಷೇತ್ ಜಲಾದ್ರಕ್ಷೇತ್ ರಕ್ಷೇತ್ ಶಿಥಿಲಬಂಧನಾತ್ ।
ಮೂರ್ಖಹಸ್ತೇ ನ ದಾತವ್ಯಮಿತಿ ರೋದಿತಿ ಪುಸ್ತಕಮ್ ॥

ಇದು ಒಂದು ಪುಷ್ಪಿಕೆ. ಇದರಲ್ಲಿ ಬರೆದಾತ ಹೇಳುತ್ತಾನೆ : 'ಈ ಗ್ರಂಥವನ್ನು ಎಣ್ಣೆ ತಾಗದ ಹಾಗೆ ನೀರು ಸೋಕದ ಹಾಗೆ, ಕಟ್ಟು ಸಡಿಲದ ಹಾಗೆ ಜೋಪಾನವಾಗಿಡಬೇಕು. ಎಣ್ಣೆ ತಾಗಿದರೆ ಜಿರಲೆ ತಿನ್ನಬಹುದು. ನೀರು ಬಿದ್ದರೆ ಬೂಸ್ಟು ಹಿಡಿದು ವಾಲೆಗಳು ಒಂದಕ್ಕೊಂದು ಅಂಟಿಕೊಂಡು ಬಿಡಿಸಲಾಗದ ಸ್ಥಿತಿಯುಂಟಾಗುತ್ತದೆ. ಕಟ್ಟು ಸಡಿಲಿದರೆ ಮಧ್ಯ ತೂತಿನಲ್ಲಿರುವ ನೂಲು ಅರಚಿ, ದೊಡ್ಡದಾಗಿ ಕೊನೆಗೆ ಅಕ್ಷರಗಳು ಸವೆದು ಹೋಗಲೂಬಹುದು. ಮೂರ್ಖರು ಪುಸ್ತಕವನ್ನು ಕೊಂಡೊಯ್ದರೆ ಮತ್ತೆ ನಿಮಗದು ಹಿಂದೆ ಸಿಗಲಾರದು. ಆದ್ದರಿಂದ ನನ್ನನ್ನು ರಕ್ಷಿಸಿ ಎಂದು ಪುಸ್ತಕ ಮೊರೆಯಿಡುತ್ತದೆ, ಎನ್ನುವ ಮೂಲಕ ತಾನೇ ಮೊರೆಯಿಟ್ಟಿದ್ದಾನೆ ಲಿಪಿಕಾರ. ಇದು ಎಷ್ಟರ ಮಟ್ಟಿಗೆ ಸತ್ಯ ವೆಂಬುದು ಈಗ ನಮ್ಮ ಅನುಭವಕ್ಕೆ ಬಂದಿದೆ. ಈ ಗ್ರಂಥಗಳನ್ನು ಸಂಗ್ರಹಿಸಿ, ಮಸಿ ಒರೆಸಿ, ಹೊಂಗರಕನ ಸೊಪ್ಪಿನ ರಸ ಸವರಿ ಮರದ ಕವಚ ಹಾಕಿ ರಕ್ಷಿಸಿದರೆ ಮುಂದೆ ಸಂಶೋಧನಕಾರರಿಗೋ ಪಾಠಾಂತರವನ್ನು ಪರಿಶೀಲಿಸುವವರಿಗೋ ಬಹಳ ಪ್ರಯೋಜನ ವಾದೀತು. ಈ ಗ್ರಂಥಗಳು ನಮಗೆ ಒಂದು 'ತವನಿಧಿ.' ಇವುಗಳ ರಕ್ಷಣ ಕಾರ್ಯ ಈಗ ಸಕಾಲಿಕವಾಗಿದೆ. ಇವನ್ನು ಚೆನ್ನಾಗಿಟ್ಟುಕೊಂಡರೆ ಸಾವಿರಾರು ವರ್ಷ ಬಾಳುತ್ತವೆ. ಮಧ್ವಾಚಾರ್ಯರ ನೇರ ಶಿಷ್ಯರಾದ ಹೃಷೀಕೇಶ ತೀರ್ಥರು ಬರೆದ ಸರ್ವಮೂಲ ಗ್ರಂಥ ಇಂದಿಗೂ ಇದೆಯೆಂದ ಮೇಲೆ, ರಕ್ಷಿಸಿದರೆ ಇವು ದೀರ್ಘಕಾಲದವರೆಗೂ ಬಾಳಿಕೆ ಬರು ತ್ತವೆಯೆಂಬುದನ್ನು ಬೇರೆ ಹೇಳಬೇಕಿಲ್ಲ.

ತುಳು ನಿಘಂಟು ಯೋಜನೆಯ ಹಸ್ತಪ್ರತಿ ಸಂಗ್ರಹ

ಈ ಯೋಜನೆಯ ಅನ್ವಯ ಸಂಶೋಧನ ಕೇಂದ್ರದಲ್ಲೀಗ ಸುಮಾರು ೨೦೦ಕ್ಕೂ ಮೇಲ್ಪಟ್ಟು ಗ್ರಂಥಗಳ ಸಂಗ್ರಹವಾಗಿದೆ. ಕೇಂದ್ರದ ನಿರ್ದೇಶಕರಾದ ಪ್ರೊ॥ ಕು. ಶಿ. ಹರಿದಾಸ ಭಟ್ಟರು ಬಹಳ ಶ್ರಮಪಟ್ಟು ಬೇರೆ ಬೇರೆ ಕಡೆಗಳಿಂದ ಗ್ರಂಥಗಳನ್ನು ಸಂಗ್ರ ಹಿಸಿ ರಕ್ಷಿಸುವ ಯೋಜನೆಯನ್ನು ಪ್ರಾರಂಭಿಸಿದ್ದಾರೆ. ಈ ಸಂಗ್ರಹ ವರ್ಷದಿಂದ ವರ್ಷಕ್ಕೆ ಬೆಳೆಯುತ್ತಾ ಇದೆ. ಸಂಶೋಧಕರಿಗೆ ಇದು ಅತ್ಯಮೂಲ್ಯ ಸಂಗ್ರಹವಾದೀತು. ಇದಕ್ಕಾಗಿ ಅವರು ಊರೂರು ಸುತ್ತಿ, ಮೂಲೆಪಾಲಾಗಿರುವ ಹಸ್ತಪ್ರತಿಗಳನ್ನು ಸಂಗ್ರಹಿಸಿದ್ದಾರೆ. ಈಗ ಇಲ್ಲಿ ಅವನ್ನು ಕ್ರಮವಾಗಿ ಜೋಡಿಸಲಾಗಿದೆ. ಈ ಸಂಗ್ರಹದಲ್ಲಿ ದ್ವೈತವೇದಾಂತ, ವೇದ, ವೈದಿಕ ಮಂತ್ರ, ಜ್ಯೋತಿಷ್ಯ, ವ್ಯಾಕರಣ, ಕನ್ನಡ ಕಾವ್ಯ ಮುಂತಾದ ವಿಷಯ ಗಳಿಗೆ ಸಂಬಂಧಿಸಿದ ಹಸ್ತಪ್ರತಿಗಳಿವೆ. ಕೆಲವು ಅಮೂಲ್ಯ ಅಪ್ರಕಟಿತ ಕೃತಿಗಳೂ ಇವೆ. ವಾಲೆಗಳು ಹೆಚ್ಚು ತ್ರುಟಿತವಾಗದೆ ಗಟ್ಟಿಮುಟ್ಟಾಗಿವೆ. ಇವು ತುಳು (ತಿಗಳಾರಿ), ನಂದಿ ನಾಗರಿ, ಕನ್ನಡ ಮತ್ತು ಮಲಯಾಳ ಲಿಪಿಗಳಲ್ಲಿವೆ. ಇವನ್ನೆಲ್ಲಾ ಧೂಳು ಜಾಡಿಸಿ, ಒರೆಸಿ, ಕವಚ ಹಾಕಿ, ಓರಣವಾಗಿರಿಸಿ, ಇವುಗಳ ಒಂದು ಗ್ರಂಥಸೂಚಿಯನ್ನು (catalogue)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇಲ್ಲಿ ಕೊಡಲಾಗಿದೆ. ಇವನ್ನು ಸದ್ಯಕ್ಕೆ ಲಿಪಿಯ ಪ್ರಕಾರ ವಿಂಗಡಿಸಿ, ಅಂತೆಯೇ ಪ್ರತ್ಯೇಕ ಕ್ರಮಾಂಕವನ್ನು ಸೂಚಿಸಿದೆ. ತುಳು ಲಿಪಿಗೆ T1, T2 ಎಂದೂ, ನಂದಿನಾಗರಿಗೆ N1, N2 ಎಂದೂ. ಕನ್ನಡಕ್ಕೆ K1, K2 ಎಂದೂ, ಮಲಯಾಳಕ್ಕೆ M1, M2 ಎಂದೂ ಕ್ರಮಾಂಕ ವನ್ನು ಕೊಟ್ಟಿದೆ. ವಿಶೇಷವೆಂದರೆ ಈ ಯಾದಿಯಲ್ಲಿ ಪ್ರತಿಗ್ರಂಥದ ಅಳತೆ, ಪ್ರಾರಂಭದ ವಾಕ್ಯಗಳು, ಸಮಾಪ್ತಿ ವಾಕ್ಯಗಳು (ಇದ್ದಲ್ಲಿ ಮಾತ್ರ) ಸೂಚಿಸಿದ್ದಲ್ಲದೆ ಆಯಾ ಗ್ರಂಥ ಗಳಲ್ಲಿರುವ ವಿಷಯಾನುಕ್ರಮಣಿಯನ್ನು ಅಲೇಖಸಂಖ್ಯೆ ಸಹಿತ ಸೂಚಿಸಲಾಗಿದೆ. ಪ್ರತಿ ಯೊಂದು ಗ್ರಂಥದಲ್ಲಿ ವಿಶೇಷವೇನಾದರೂ ಕಂಡುಬಂದರೆ ಅವನ್ನೂ ಕೆಳಗೆ ವಿವರವಾಗಿ ಬರೆದಿದೆ. ಸಂಶೋಧಕರಿಗಾಗಲಿ. ಬರೇ ನೋಡಬೇಕೆಂದಿರುವವರಿಗಾಗಲಿ ಇದರಿಂದ ಸಾಕಷ್ಟು ಪ್ರಯೋಜನವಾದೀತು ಎಂದು ನನ್ನ ಅನಿಸಿಕೆ.

ಪ್ರೊ|| ಕು. ಶಿ. ಹರಿದಾಸ ಭಟ್ಟರು ನನ್ನ ಮೇಲಿನ ಅಭಿಮಾನದಿಂದ ಈ ಗ್ರಂಥ ಸೂಚಿಯನ್ನು ತಯಾರಿಸಲು ಹೇಳಿದಾಗ, ನಾನೇನು ತಜ್ಞನಲ್ಲದಿದ್ದರೂ ನನಗೂ ಈ ಗ್ರಂಥಗಳ ಅವಲೋಕನದಿಂದ ಪ್ರಯೋಜನವಾದೀತೆಂಬ ಭಾವನೆಯಿಂದ ಈ ಸಾಹಸ ವನ್ನು ಕೈಗೆತ್ತಿ ಕೊಂಡೆ. ನನ್ನ ವಿವರಣೆಯಲ್ಲಿ ಲೋಪದೋಷಗಳು ಇರಬಹುದು. ಈ ಸಂಗ್ರಹ ಮುಂದೆ ಬೃಹದಾಕಾರದಲ್ಲಿ ಬೆಳೆಯುವ ಸಂಭವವಿದೆ. ಹರಿದಾಸ ಭಟ್ಟರ ಭಗೀರಥ ಪ್ರಯತ್ನ, ಮತ್ತು ಅಭಿಮಾನಿಗಳ ಕೊಡುಗೆಯಿಂದ ಇದು ಬೆಳೆದಾಗ ಇದರಲ್ಲಿ ಇನ್ನೂ ಪರಿಷ್ಕರಿಸಬೇಕಾದ ಸಂದರ್ಭ ಬರಬಹುದು. ಆಗ ಪುನಃ ಎಚ್ಚರಿಕೆಯಿಂದ ಇನ್ನೂ ಹೆಚ್ಚಿನ ವಿವರವನ್ನು ಒದಗಿಸುವ ಪ್ರಯತ್ನ ಮಾಡುತ್ತೇನೆ. ಯಾದಿಯನ್ನು ನೋಡಿದ ಮಹನೀಯರ ಸಲಹೆ ಸೂಚನೆಗಳನ್ನು ಸ್ವೀಕರಿಸಲು ನಾನು ಸದಾ ಸಿದ್ಧ ನಿದ್ದೇನೆ. ಈ ಸಂಗ್ರಹ ಬೆಳೆಯಲಿ, ಸಂಶೋಧಕರಿಗೆ ಇದರಿಂದ ಪ್ರಯೋಜನವಾಗಲಿ ಎಂದು ನನ್ನ ಹಾರೈಕೆ.

ಉಡುಪಿ
ಆಗಸ್ಟ್ ೧೫, ೧೯೮೦

ಪ್ರೊ. ಎಂ. ರಾಜಗೋಪಾಲಾಚಾರ್ಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕನ್ನಡ ಲಿಪಿಯ
ತಾಡವಾಲೆ ಗ್ರಂಥಗಳು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

K 1 : ಮೈರಾವಣ ಕಾಳಗ

ಕವಿಯ ಹೆಸರು / ಸ್ಥಳ : ಅಜಪುರ ವೆಂಕಟ, ಬ್ರಹ್ಮಾವರ

ಭಾಷೆ : ಕನ್ನಡ ಲಿಪಿ : ಕನ್ನಡ ಗಾತ್ರ ಅಂ. ೧೫ × ೧.೫

೧ ರಿಂದ ೩೩ ಆಲೇಖಗಳು

ಹಸ್ತಪ್ರತಿಯ ಸದ್ಯ ಸ್ಥಿತಿ (ತ್ರುಟಿತ, ಅಪೂರ್ಣ ಇ.) : ತ್ರುಟಿತ, ಅಪೂರ್ಣ

ಆರಂಭದ ಸಾಲುಗಳು : ಶ್ರೀಮಧ್ವಗುರುಭ್ಯೋ ನಮಃ ಶ್ರೀ ಗಣೇಶಾಯ ನಮಃ ರಾಮಚಂದ್ರಾಯ ನಮಃ ರಾಮಾಯಣದೊಳಗಣ ಮೈರಾವಣ ಕಾಳಗದ ಪ್ರತಿ ... ಶುಭಮಸ್ತು, ನಿರ್ವಿಘ್ನಮಸ್ತು.*

ಕೊನೆಯ ಸಾಲುಗಳು : ಕಂಣಿನ ನಿದ್ರೆಬಾರದೆ ಕಾಂತನನು ನೆನೆದೆಂಣಿಸುತ ರಾತ್ರಿಯಲಿ.

ಕವಿ, ಕೃತಿಯ ಕಾಲ ವಿಚಾರ (ಆಧಾರದೊಂದಿಗೆ) : (ಕ್ರಿ. ಶ. ೧೭೨೫) ಇವನು 'ಸರಸಿಜೋದ್ಭವ ನಾಮ' (ಬ್ರಹ್ಮಾವರ)ದವನು. ಸುಬ್ಬ, ಲಕ್ಷ್ಮಿಯರ ಮಗ, ವೆಂಕಟ.

ಛಂದಸ್ಸಿನ ವಿಚಾರ (ಪದ್ಯವೆ, ಗದ್ಯವೆ ? ವೃತ್ತ ಯಾವುದು ?): ಯಕ್ಷಗಾನ. ಪದ್ಯಗಳು.

ಈ ಮೊದಲು ಅಚ್ಚಾಗಿರಬಹುದೆ ? : ಹೌದು

ಕವಿ ಕೃತಿಯ ಬಗ್ಗೆ ಬೇರೆಡೆ ಮಾಹಿತಿ ಇದೆಯೆ ? : ಹೌದು. cf. ಕಾರಂತರ 'ಯಕ್ಷಗಾನ' 'ಬಯಲಾಟ'

ವಸ್ತು—ವಿಷಯ (ಸಂಕ್ಷಿಪ್ತವಾಗಿ) : ಯಕ್ಷಗಾನ

ವಿಶೇಷ ವಿಚಾರ : * ಉ/ಶ್ಲೋಕ

ಶ್ರೀ ಮದ್ಭಾಸ್ಕರವಂಶನಾಥ ಪಾದಕಮಲಂ ಮಂಶೋದ್ಭವಾ ಸೇವಿತಂ
ಶ್ರೀಮ . . . .ಮುಖ್ಯ ದಿವಿಜ ಸ್ತೋಮಾರ್ಚಿತಾಂಘ್ರಿದ್ವಯಂ ।
ಹೇಮಾಗೇಂದ್ರ ಸಮಾನಚಾರ್ವಪಘನಂ ಭಕ್ತಾಳಿಸಂರಕ್ಷಣಂ
ಭೀಮಂ ಮಾರುತಿ . . . . ಶುಭಮುಂ ಕಾರುಣ್ಯದಿಂದಂ ಸದಾ ॥

K 2 : ಕೌಶಿಕ ರಾಮಾಯಣ

ಕವಿಯ ಹೆಸರು/ಸ್ಥಳ : ಬತ್ತಲೇಶ್ವರ

ಭಾಷೆ : ಕನ್ನಡ ಲಿಪಿ : ಕನ್ನಡ ಗಾತ್ರ ಅಂ. ೨೦ × ೨.೪

೧ ರಿಂದ ೧೧೭ ಆಲೇಖಗಳು

ಹಸ್ತಪ್ರತಿಯ ಸದ್ಯ ಸ್ಥಿತಿ (ತ್ರುಟಿತ, ಅಪೂರ್ಣ ಇ.) : ತ್ರುಟಿತ

ಆರಂಭದ ಸಾಲುಗಳು : ಸ್ವಸ್ತಿಶ್ರೀ ಜಯಾಭ್ಯುದಯ ಶಾಲಿವಾಹನ ಶಕ ವರ್ಷ ೧೭೮೮ ನೇ ಕ್ರೋಧನ ಸಂವತ್ಸರ ಫಾಲ್ಗುಣ ಬಹುಳ ೧೨ ಬುಧವಾರ ವಾಲ್ಮೀಕಿ ರಾಮಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯಣ ಬರೆಯುವುದಕ್ಕೆ ಶುಭವಂಸ್ತು। ಶ್ರೀ ಗಣಪತಯೇ ನಮಃ ಇತ್ಯಾದಿ.*

ಕೊನೆಯ ಸಾಲುಗಳು :

ತಪ್ಪು ದಶರಥ ನೃಪತಿಯದು ತಪ್ಪು ಪಾಂಡುವಿನಾಯ್ತು ಮತ್ತಾ
ತಪ್ಪು ಪಲಬರಿನಾಯ್ತು ಮತ್ತಾ ತಪ್ಪು ತಪ್ಪೆನ್ನೊಳಗೆ ಪೊಸತಲ್ಲ ।
ತಪ್ಪನೆ ಕಡೆಗಣಿಸಿ ನೋಡದೆಯಿಪ್ಪವಂದದಿ ತಿದ್ದಿ ಮಾಡುವ
ಸರ್ವಶಯನನು ಸ್ವಾಮಿಯರಸನು ಬಿಡದೆ ಸಲಹುವನು ॥

ಅಕ್ಷಯ ಸಂವತ್ಸರದ ಅಧಿಕ ಜ್ಯೇಷ್ಠ ಶುದ್ಧ ೧೩ ಶನಿವಾರ ಹಗಲು ತಾಸು ೧ಕ್ಕೆ ಬರೆದು ಮುಗಿಸಿದ ವಾಲ್ಮೀಕಿ ರಾಮಾಯಣ ಪುಸ್ತಕಕ್ಕೆ ಆಚಂದ್ರಾರ್ಕಮಸ್ತು ಮಂಗಲ್ಯಮಸ್ತು, ನಿರ್ವಿಘ್ನಮಸ್ತು, ವಂಶಾಭಿವೃದ್ಧಿರಸ್ತು.

ಹೊನ್ನಾವರ ತಾಲ್ಲೂಕು ಬೆಳಕ್ಕಿಮಾಗಣೆ ಹಡಿಲ ಗ್ರಾಮದಲ್ಲಿರುವ ಮಂಜಭಟ್ಟನ ಬರಹ ರುಜು ಮಂಜ ಭಟ್ಟನ ರುಜು.

ಕವಿ, ಕೃತಿಯ ಕಾಲ ವಿಚಾರ (ಆಧಾರದೊಂದಿಗೆ) : ಪ್ರಕಟಿತ

ಛಂದಸ್ಸಿನ ವಿಚಾರ (ಪದ್ಯವೆ, ಗದ್ಯವೆ? ವೃತ್ತ ಯಾವುದು ?): ಪದ್ಯ. ಭಾಮಿನಿಷಟ್ಪದಿ

ಈ ಮೊದಲು ಅಚ್ಚಾಗಿರಬಹುದೆ ? : ಹೌದು, ಡಾ ॥ ಕಾರಂತರು ಸಂಪಾದಿಸಿದ್ದಾರೆ.

ಕವಿ ಕೃತಿಯ ಬಗ್ಗೆ ಬೇರೆಡೆ ಮಾಹಿತಿ ಇದೆಯೆ ? : ಹೌದು

ವಸ್ತು—ವಿಷಯ (ಸಂಕ್ಷಿಪ್ತವಾಗಿ) : ರಾಮಾಯಣ ಕಾವ್ಯ

ವಿಶೇಷ ವಿಚಾರ :

* ಭೂಮಿಪತಿ ದಶರಥನ ಬಸುರಲಿ
ರಾಮ ಲಕ್ಷ್ಮಣ ಭರತ ಶತ್ರುಹ
ನಾಮದಲ್ಲಿ ಜನಿಸಿದರು ನರಹರಿಯಮರಪತಿ ನಲಿಯೆ ॥

ಇದು ಕೌಶಿಕ ರಾಮಾಯಣವಾಗಿದ್ದರೂ ಹಸ್ತಪ್ರತಿಗಳಲ್ಲಿ ವಾಲ್ಮೀಕಿ ರಾಮಾಯಣ ಎಂದೇ ಬರೆಯುವ ರೂಢಿಯಿದ್ದಂತೆ ಕಾಣುತ್ತದೆ.

K 3 : ಕೌಶಿಕ ರಾಮಾಯಣ

ಕವಿಯ ಹೆಸರು/ಸ್ಥಳ : ಬತ್ತಲೇಶ್ವರ

ಭಾಷೆ : ಕನ್ನಡ   ಲಿಪಿ : ಕನ್ನಡ   ಗಾತ್ರ ಅಂ. ೧೪.೫ × ೨.೩

೧ ರಿಂದ ೧೭೯ ಆಲೇಖಗಳು

ಹಸ್ತಪ್ರತಿಯ ಸದ್ಯ ಸ್ಥಿತಿ (ತ್ರುಟಿತ, ಅಪೂರ್ಣ ಇ.) : ಪ್ರತಿ ಚೆನ್ನಾಗಿದೆ, ಅಪೂರ್ಣ.

ಆರಂಭದ ಸಾಲುಗಳು : *ಶ್ರೀ ಗಣಾಧಿಪತಯೇ ನಮಃ ಶಾರದಾಂಬಾಯೈ ನಮಃ

ಕೊನೆಯ ಸಾಲುಗಳು : ದನುಜ ಹೊರವಂಟಾ. । ೫೩ । ಎಂದಿದ್ದು 'ಸಂಧಿ ೨೫ ಕ್ಕಂ ೧೫೦೩ ಕ್ಕಂ ಮಂಗಳ ಮಹಾಶ್ರೀ. ಸಮಾಪ್ತಿ ವಾಕ್ಯವಿಲ್ಲ.

ಕವಿ, ಕೃತಿಯ ಕಾಲ ವಿಚಾರ (ಆಧಾರದೊಂದಿಗೆ):

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಛಂದಸ್ಸಿನ ವಿಚಾರ (ಪದ್ಯವೆ, ಗದ್ಯವೆ ? ವೃತ್ತ ಯಾವುದು ?): ಪದ್ಯ. ಭಾಮಿನಿ ಷಟ್ಪದಿ.

ಈ ಮೊದಲು ಅಚ್ಚಾಗಿರಬಹುದೆ ? : ಹೌದು, ಡಾ॥ ಕಾರಂತರು ಸಂಪಾದಿಸಿ ಮುದ್ರಿಸಿದ್ದಾರೆ.

ಕವಿ ಕೃತಿಯ ಬಗ್ಗೆ ಬೇರೆಡೆ ಮಾಹಿತಿ ಇದೆಯೆ ? : ಹೌದು.

ವಸ್ತು—ವಿಷಯ (ಸಂಕ್ಷಿಪ್ತವಾಗಿ): ರಾಮಾಯಣ ಕಾವ್ಯ.

ವಿಶೇಷ ವಿಚಾರ :

* ಶ್ರೀ ಸಕಲ ಜಗವಂದ್ಯನಂಕುಶ
ಪಾಶ ಮೋದಕ ಪರಶುಧರವಿ
ಘ್ನೇಶ ಗಜಮುಖ ಗಣಪ ಲಂಬೋದರ ಮಹಾಕಾಯ ।
ವಾಸವಾರ್ಚಿತ ಕಮಲಭವ ಗಿರಿ
ಜೇಶ ಪರಿಪೂಜಿತ ವಿನಾಯಕ
ಈಶಸುತ ರಕ್ಷಿಸುಗೆ ನಮ್ಮನು ಪಾರ್ವತೀತನಯ ।

ಶ್ರೀ ಲಕ್ಷ್ಮೀನಾರಾಯಣಾಯ ನಮಃ ಹರದೂರ ದುರ್ಗಾಂಬನ ಪಾದಕ್ಕೆ ನಮಸ್ಕಾರ

ಭೂಮಿಪತಿ ದಶರಥನ ಬಸುರಲಿ
ರಾಮಲಕ್ಷ್ಮಣ ಭರತ ಶತ್ರುಹ
ನಾಮದಲಿ ಜನಿಸಿದರು ನರಹರಿಯಮರಪತಿ ನಲಿಯೆ ॥ಪಲ್ಲ॥
ಬಾಲಹಿಮಕರ ಕಿರಣ ಮಂದಿತ । ಭಾಳಲೋಚನ ರತುನ ಮಕುಟ ವಿ
ಶಾಲ ನಾಗಜವದನ ವರದಾಭಯ ಕರಾಂಬುಜನೆ ।
ಶೈಲಜಾ ವರಪುತ್ರ ಸಕಲಸು । ರಾಳಿವಂದಿತ ಚರಣ ಕಮಲನೆ
ಪಾಲಿಸೆನ್ನಯ ಮತಿಗೆ ಮಂಗಳವಿತ್ತು ಗಣನಾಥ ॥ ೧ ॥

(ಕನ್ನಡ ಕಾವ್ಯ 'ಶ್ರೀ'ಯಿಂದ ಪ್ರಾರಂಭವಾಗುತ್ತದೆಯೆಂಬ ಸಂಪ್ರದಾಯವನನುಸರಿಸಿ ಇದರಲ್ಲಿ ಶ್ರೀಕಾರದಿಂದ ಪ್ರಾರಂಭವಾದ ಪದ್ಯವಿದೆ). ಡಾ॥ ಕಾರಂತರು ಸಂಪಾದಿಸಿ ಮುದ್ರಿಸಿದ ಪುಸ್ತಕದಲ್ಲಿ ಈ ಪದ್ಯವಿಲ್ಲ. ಆದುದರಿಂದ ಇದು ಪ್ರಕ್ಷಿಪ್ತವಿರಬಹುದೆ ? ಅಥವಾ ಅವರು ಕೈಬಿಟ್ಟಿರಬಹುದೆ ?

K 4 : ಕನ್ನಡ ಭಾರತ

ಕವಿಯ ಹೆಸರು / ಸ್ಥಳ : ಕುಮಾರ ವ್ಯಾಸ ಮತ್ತು ತಿಮ್ಮಣ್ಣ ಕವಿ

ಭಾಷೆ : ಕನ್ನಡ ಲಿಪಿ : ಕನ್ನಡ ೨ ರೀತಿಯ ವಾಲೆಗಳು

ಗಾತ್ರ ಅಂ. ೧೯.೫ × ೨.೨

೨೦.೫ × ೨.೨

೨೭–೧೦೬ ಆಲೇಖಗಳು

೨೩೦–೨೬೭

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಸ್ತಪ್ರತಿಯ ಸದ್ಯ ಸ್ಥಿತಿ (ತ್ರುಟಿತ, ಅಪೂರ್ಣ ಇ.) : ಲಿಪಿ ಚೆನ್ನಾಗಿದೆ.

ಆರಂಭದ ಸಾಲುಗಳು : ಲವಹರ । ಹರನ ನಯನದ ವಹ್ನಿಯೆಂಬಂ । ತಿರಲು ಕವಿದಲು ಬಾಣ ಸಂತತಿ ಪಾರ್ಥನಿದಿರಿನಲಿ, (೨ನೇ ಪುಟ) ಕೇಳು ಜನಮೇಜಯ ಧರಿ ತ್ರೀಪಾಲ ಬಳಿಕಾ ಮುಖ ತುರಂಗಮುಲೋಲತೆಯೊಲೊಲಿದಖಿಲ ದೇಶಂಗಳಲಿ ಸಂಚರಿಸಿ

ಕೊನೆಯ ಸಾಲುಗಳು : *

ಛಂದಸ್ಸಿನ ವಿಚಾರ (ಪದ್ಯವೆ, ಗದ್ಯವೆ ? ವೃತ್ತ ಯಾವುದು ?) : ಪದ್ಯ. ಭಾಮಿನಿ ಷಟ್ಪದಿ

ಈ ಮೊದಲು ಅಚ್ಚಾಗಿರಬಹುದೆ ? : ಹೌದು.

ವಸ್ತು—ವಿಷಯ (ಸಂಕ್ಷಿಪ್ತವಾಗಿ) : ಕನ್ನಡ ಕಾವ್ಯ.

ವಿಶೇಷ ವಿಚಾರ : * ೧೦೭ನೇ ವಾಲೆಯಲ್ಲಿ ಶ್ರೀಗಣಾಧಿಪತಯೇ ನಮಃ ಸ್ವರ್ಗಾರೋಹಣ ಪರ್ವಸಮಾಪ್ತಂ. ಇದರಲ್ಲಿ ಅಶ್ವಮೇಧ ಪರ್ವ ಮುಸಲಿಪರ್ವ ಸ್ವರ್ಗಾರೋಹಣ ಪರ್ವಗಳಿವೆ. ಮತ್ತೆ ೨೩೦–೨೬೭ರ ವರೆಗಿನ ವಾಲೆಗಳಲ್ಲಿ ಮೊದಲ ಸಂಧಿಗಳಿದ್ದಿರಬೇಕು. ಉತ್ತರಭಾ ಕೊನೆಯವಾಲೆ ೨೬೭ರಲ್ಲಿ.

ಈ ಪುಸ್ತಕದಲ್ಲಿ ಪಲುಲೋಮ, ಆಸೀಕ, ಶಿವನ ಭಿಕ್ಷಾಟನೆ, ಆದಿ, ಐರಾವತ, ಸಭಾ, ಅರಣ್ಯ, ವಿರಾಟ, ಉದ್ಯೋಗ, ಭೀಷ್ಮಪರ್ವ(ಗಳಿದ್ದಿರಬೇಕು, ಅವುಗಳ ವಾಲೆ ಇಲ್ಲ)ಗಳು ಜುಂಮುಲಾ ಪದ ೭೧೭೫ ಪದಯಿರುತ್ತದೆ. ಶ್ರೀ ಶಾರದಾಮ್ಮನವರ ಪಾದವೇ ಗತಿ. ತಪ್ಪಂಬರದಾತಂ ಕಡುಜಡನಪ್ಪಂ ತಪ್ಪಂಬರದನೆಂದು ಬಯ್ಯಲ್ ಬೇಡಿಂ ತಪ್ಪಕ್ಕು ಶುದ್ಧಮಕ್ಕುಂ ಓದುವ ಶ್ರೀ ಮಹಾನುಭಾವರ್ ತಿದ್ದಿಕೊಂಡು ರಾಜಸಮಾನಂ.

ಸಾಲಗ್ರಾಮದ ನರಶಿಂಹ ದೇವರ ಪಾದವೇ ಗತಿ. ಯೀಪುಸ್ತಕ ಬರೆದಾತನು ಗುಂಡ್ಮಿ ನಾಗ ಮಯ್ಯನ ಮಂಗ ಶೀತಾರಾಮ ಮಯ್ಯನು ಬರದ ಪುಸ್ತಕಕ್ಕೆ ಆಚಂದ್ರಾರ್ಕಮಸ್ತು.

K 5 : ರಾಮಾಯಣ

ಭಾಷೆ : ಕನ್ನಡ ಲಿಪಿ : ಕನ್ನಡ ೨೩ ರಿಂದ ೧೩೦ರ ವರೆಗೆ ಸಾಮಾನ್ಯವಿದೆ
ಗಾತ್ರ ಅಂ. ೧೯.೫ × ೨.೧

ಹಸ್ತಪ್ರತಿಯ ಸದ್ಯ ಸ್ಥಿತಿ (ತುಟ್ರಿತ, ಅಪೂರ್ಣ ಇ.) :
ತ್ರುಟಿತ, ಅಪೂರ್ಣ, ಬರಹ ಮುದ್ದಾಗಿದೆ.

ಛಂದಸ್ಸಿನ ವಿಚಾರ (ಪದ್ಯವೆ, ಗದ್ಯವೆ ? ವೃತ್ತ ಯಾವುದು.): ಪದ್ಯ. ಭಾಮಿನಿ.

ಈ ಮೊದಲು ಅಚ್ಚಾಗಿರಬಹುದೆ ?: ಹೌದು.

ಕವಿ ಕೃತಿಯ ಬಗ್ಗೆ ಬೇರೆಡೆ ಮಾಹಿತಿ ಇದೆಯೆ ?: ಹೌದು.

ವಸ್ತು—ವಿಷಯ (ಸಂಕ್ಷಿಪ್ತವಾಗಿ) : ಕಾವ್ಯ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಶೇಷ ವಿಚಾರ : ಪ್ರತಿ ಸಂಪೂರ್ಣ ಜೀರ್ಣವಾಗಿ ತ್ರುಟಿತವಾಗಿದೆ.
ಆದ್ಯಂತಗಳಿಲ್ಲದುದರಿಂದ ನಿರುಪಯುಕ್ತ.

K 6 : ಜೈಮಿನಿ ಭಾರತ (ಕನ್ನಡ)

ಕವಿಯ ಹೆಸರು / ಸ್ಥಳ : ದೇವಪುರ, ಲಕ್ಷ್ಮೀಶ

ಭಾಷೆ : ಕನ್ನಡ ಲಿಪಿ : ಕನ್ನಡ ಗಾತ್ರ ಅಂ. ೧೯.೫ × ೨.೩
೧ ರಿಂದ ೨೪೩ ಆಲೇಖಗಳು

ಹಸ್ತಪ್ರತಿಯ ಸದ್ಯ ಸ್ಥಿತಿ : ಪ್ರತಿ ಚೆನ್ನಾಗಿದೆ, ಸಂಪೂರ್ಣವಿದೆ.

ಆರಂಭದ ಸಾಲುಗಳು : ಸ್ವಸ್ತಿಶ್ರೀ ಗಣಾಧಿಪತಯೇ ನಮಃ ಶಾರದಾ ಗುರುಭ್ಯೋ ನಮಃ ಬಾರಕೂರು ಭಟ್ಟೆ ವಿನಾಯಕ ದೇವರ ಪಾದವೇ ಗತ್ತಿಃ । ಶ್ರೀ ಸೋಮೇಶ್ವರಾಯ ನಮಃ ಭಾರತದೊಳಗಣ ಜಯಮುನಿ ಬರಉದಕ್ಕೆ ಶುಭಮಸ್ತು *

ಕೊನೆಯ ಸಾಲುಗಳು : ಅಂತು ಸಂಧಿ ೩೩ಕ್ಕಂ ಪದ ೨೫೭೮ಕ್ಕಂ ಪದಾ ಎರಡು ಸಾವಿರದ ಐನೂರ ತೊಂಭತ್ತೆಂಟಕ್ಕಂ ಮಂಗಳ ಮಹಾ ಶ್ರೀ—ಮೂಡುಕೇರಿ ಸೋಮೇಶ್ವರಾಯ ನಮಃ ಈ ಪುಸ್ತಕವ ಬರೆದಾತನಾರೆಂದರೆ ವಿಶ್ವಾಮಿತ್ರಗೋತ್ರದ ಹೆರಾಡಿ ಪಾತ್ರಿ ವೆಂಕಪ್ಪ ಹೆಬ್ಬಾರನ ಮ ನಿರ್ರಿಯಣನ ಬರಹಾ ದುಂದುಭಿ ಸಂವತ್ಸರದ ಭಾದ್ರಪದ ಶುದ್ಧ ೧೩ಯು ಸ್ಥಿರವಾರದಲ್ಲಿ ಬರದು ಮುಗಿಸಿದ ಜಯಮುನಿ ಪುಸ್ತಕ.

ಕವಿ, ಕೃತಿಯ ಕಾಲ ವಿಚಾರ (ಆಧಾರದೊಂದಿಗೆ) : ಪ್ರಕಟಿತ.

ಛಂದಸ್ಸಿನ ವಿಚಾರ (ಪದ್ಯವೆ, ಗದ್ಯವೆ ? ವೃತ್ತ ಯಾವುದು ?): ವಾರ್ಧಕ ಷಟ್ಪದಿ.

ಈ ಮೊದಲು ಅಚ್ಚಾಗಿರಬಹುದೆ ? : ಹೌದು.

ಕವಿ ಕೃತಿಯ ಬಗ್ಗೆ ಬೇರೆಡೆ ಮಾಹಿತಿ ಇದೆಯೆ? : ಹೌದು.

ವಸ್ತು—ವಿಷಯ (ಸಂಕ್ಷಿಪ್ತವಾಗಿ) : ಜೈಮಿನಿಯ ಸಂಸ್ಕೃತ ಭಾರತದ ಕನ್ನಡ ವಾರ್ಧಕ ಷಟ್ಪದಿಯ ರೂಪಾಂತರ, ಅಶ್ವಮೇಧಿಕ ಪರ್ವ.

ವಿಶೇಷ ವಿಚಾರ : *ವಾರ್ಧಕ । ಲಾವಗಂ ಸರಸ ಕರುಣಾಮೃತದ
ಎಂದೇ ಪ್ರಾರಂಭವಾಗಿದೆ, ಈ ಪದ್ಯದ 'ಶ್ರೀವಧೂವಿನಂಬಕ' ಎಂಬ ಮೊದಲಿನ ಸಾಲುಗಳನ್ನು ಉದ್ದೇಶಪೂರ್ವಕವಾಗಿಯೆಂಬಂತೆ ಕೈಬಿಟ್ಟಿದೆ, ಕಾರಣ ಚಿಂತನೀಯ. (ಉಳಿದೆಲ್ಲವು ಮುದ್ರಿತ ಪ್ರತಿಯಲ್ಲಿರುವಂತೆಯೇ ಇದೆ).

K 7 : ರಾಮಾಯಣ (ಕೌಶಿಕ)

ಕವಿಯ ಹೆಸರು / ಸ್ಥಳ : ಬತ್ತಲೇಶ್ವರ

ಭಾಷೆ : ಕನ್ನಡ ಲಿಪಿ : ಕನ್ನಡ. ಗಾತ್ರ ಅಂ. ೧೮.೫ × ೨.೫
೨ ರಿಂದ ೧೬೪ ಆಲೇಖಗಳು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಸ್ತಪ್ರತಿಯ ಸದ್ಯ ಸ್ಥಿತಿ : ತ್ರುಟಿತ, ಅಪೂರ್ಣ.
ಆರಂಭದ ಸಾಲುಗಳು : ಮೊದಲ ಅಲೇಖವಿಲ್ಲ, ೨ನೇ ಅಲೇಖ ಪ್ರಾರಂಭದಲ್ಲಿ–

ಶೈಲಜಾ ವರಪುತ್ರ ಸಕಲಸು
ರಾಳಿವಂದಿತ ಚರಣ ಕಮಲನೆ
ಪಾಲಿಸೆನ್ನಯ ಮತಿಗೆ ಮಂಗಳವಿತ್ತು ಗಣನಾಥಾ ।

ಕೊನೆಯ ಸಾಲುಗಳು :

ಕೇಳಲಾರದರೊಂದು ಸಂಧಿಯನಾದರಕ್ಕರದಿ
ಕೇಳಿದರೆ ಸಾಕಖಿಳದೋಶ ಕ
ರಾಳ ವಿಷಗಾರುಡಲು ತಪ

ಛಂದಸ್ಸಿನ ವಿಚಾರ (ಪದ್ಯವೆ, ಗದ್ಯವೆ ? ವೃತ್ತ ಯಾವುದು ?) : ಭಾಮಿನಿ ಷಟ್ಪದಿ.
ಈ ಮೊದಲು ಅಚ್ಚಾಗಿರಬಹುದೆ ? : ಹೌದು, ಡಾ॥ ಕಾರಂತರು ಸಂಪಾದಿಸಿದ್ದಾರೆ.
ಕವಿ ಕೃತಿಯ ಬಗ್ಗೆ ಬೇರೆಡೆ ಮಾಹಿತಿ ಇದೆಯೆ ? : ಹೌದು.
ವಸ್ತು—ವಿಷಯ (ಸಂಕ್ಷಿಪ್ತವಾಗಿ) : ರಾಮಾಯಣದ ಕಥನಕಾವ್ಯ, ವಾಲ್ಮೀಕಿಯ ರಾಮಾಯಣಕ್ಕಿಂತ ಕಥಾ ಸಂದರ್ಭಗಳು ಭಿನ್ನವಾಗಿವೆ.
ವಿಶೇಷ ವಿಚಾರ : ಅಲ್ಲಲ್ಲಿ ರೇಖಾ ಚಿತ್ರಗಳಿವೆ.

* ಅಂತೂ ಸಂಧಿ ೪೩ಕ್ಕಂ ಪದ ೨೬೫೦ಕ್ಕಂ ಮಂಗಳ ಮಹಾಶ್ರೀ ರಾಮಚಂದ್ರಾಯ ನಮಃ । ವಿಸರ್ಗ ಬಿಂದುಮಾತ್ರಾಣಿ ಪದಪಾದಾಕ್ಷರಾಣಿಚ ನ್ಯೂನಾನಿಚಾತಿರಿಕ್ತಾನಿ ಕ್ಷಮಸ್ವ ಪುರುಷೋತ್ತಮ ॥ ಕ್ಷಮಸ್ವ ಪರಮೇಶ್ವರ ॥ ದುರ್ಗಾಂಬಾಯೈ ನಮಃ ಕೇಶವಾಯ ನಮಃ, ಕೊಲ್ಲೂರ ಮೂಕಾಂಬಿಕೆಯಮ್ಮ ನವರ ಪಾದವೇ ಗತಿ ನಿರ್ವಿಘ್ನಮಸ್ತು, ಶುಭಮಸ್ತು ಮಂಗಳಮಸ್ತು ಐಶ್ವರ್ಯ ಮಸ್ತು.

ಶ್ರೀ ಮುಖನಾಮ ಸಂವತ್ಸರದ ಫಾಲ್ಗುಣ ಶು.೩ಯು ಸಉಮ್ಯವಾರ ದಿವ್ಯ ಬರದು ಮುಗಿಸಿದ ಈ ರಾಮಾಯಣ ಪುಸ್ತಕಕ್ಕೆ ಅನಂತೈಶ್ವರ್ಯಮಸ್ತು.

ಈ ಪುಸ್ತಕ ಬರೆದಾತಂ ಚಂದಾವರ ಸೀಮೆಯೊಳಗಣ ಹೊಂನಾವರ ಗ್ರಾಮದೊಳಗೆ ಕಹಿತಕೋಡಿ ಗೋಳಿನಾಯ್ಕನ ದತ್ತಕುವರ ರಾಮಯ್ಯನು ಬರದಾತಾ ।

ಈ ಪುಸ್ತಕದೊಳಗೆ ಅಂಗುಲ ದೋಷವಿದ್ದರೂ ಓದುವಂತ ಪುಣ್ಯಾತ್ಮರು ತಿದ್ದಿ ಕೊಂಡು ಓದುವರು । ಬಯ್ಯಲಾಗದೂ ತರಳನೂ ಯಂತಾ ಕ್ಷಮಿಸುವದೂ.

ರಾಗಾ—ಪದಗಳು

ರಾಮಾ ರಕ್ಷಿಸೋ ಕೋದಂಡಪಾಣೀ ರಕ್ಷಿಸೋ ॥ ಪಲ್ಲ ।
ಅಜಮಿಳಗೊಲಿದಂಬರೀಷನಕಾಯ್ದೆ
ಗಜರಾಜಗೊಲಿದು ದ್ರುಉಪದಿಯ ರಕ್ಷಿಸಿದೆ
ಭಜಿಸುವ ಭಕ್ತರ ಪಾಪವ ಪೊರೆದೆ
ಹರಿ ನಿಮ್ಮ ಸ್ಮರಿಸದೆ ನಾ ಮರುಳಾದೆ ॥

ಎಂಬ ಪದ್ಯವೂ ಇದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

K 8 : ದೇವೀಮಹಾತ್ಮೆ (ಅಂಬಿಕಾ ವಿಜಯ)

ಕವಿಯ ಹೆಸರು / ಸ್ಥಳ : ಒಬ್ಬೂರು ರಂಗ (ಒಬ್ಬೂರು) ಇರಬಹುದು.

ಭಾಷೆ : ಕನ್ನಡ ಲಿಪಿ : ಕನ್ನಡ ಗಾತ್ರ ಅಂ. ೧೯ × ೨.೩
೧ ರಿಂದ ೧೨೩ ಆಲೇಖಗಳು

ಹಸ್ತಪ್ರತಿಯ ಸದ್ಯ ಸ್ಥಿತಿ : ಪ್ರತಿ ಚೆನ್ನಾಗಿದೆ, (ಲಿಪಿಯೂ ಸಹ); ಸಂಪೂರ್ಣವಿದೆ.

ಆರಂಭದ ಸಾಲುಗಳು :

ಶ್ರೀ ಗಣಾಧಿಪತಯೇ ನಮಃ (ಇತ್ಯಾದಿ ಸಾಂಪ್ರದಾಯಿಕ ನಮನಗಳು)
ಸರ್ವಮಂಗಲ ಮಾಂಗಲ್ಯೇ ಶಿವೇ ಸರ್ವಾರ್ಥ ಸಾಧಕೇ ।
ಶರಣ್ಯೇ ತ್ರ್ಯಂಬಕೇ ದೇವಿ ನಾರಾಯಣಿ ನಮೋಽಸ್ತು ತೇ ॥
ದೇವೀ ಮಹಾತ್ಮೆ ಪ್ರಬಂಧ ಪ್ರಾಕೃತದಂಬಿಕಾ ವಿಜಯುವ ಬರೆಯುವುದಕ್ಕೆ ಶುಭಮಸ್ತು *

ಕವಿ, ಕೃತಿಯ ಕಾಲ ವಿಚಾರ (ಆಧಾರದೊಂದಿಗೆ) : ಸು. ೧೭೫೦. ಇವನ ಇನ್ನೊಂದು ಕಾವ್ಯ ಪರಶುರಾಮ ರಾಮಾಯಣ (ವಾರ್ಧಕ). ಸ್ಮಾರ್ತ ಬ್ರಾಹ್ಮಣ, ಒಬ್ಬೂರು ರಂಗನಾಥ ಇವನ ಕುಲದೇವರು.

ಛಂದಸ್ಸಿನ ವಿಚಾರ (ಪದ್ಯವೆ, ಗದ್ಯವೆ ? ವೃತ್ತ ಯಾವುದು ?) : ಭಾಮಿನಿ ಷಟ್ಪದಿ.

ಈ ಮೊದಲು ಅಚ್ಚಾಗಿರಬಹುದೆ ? : ತಿಳಿದಿಲ್ಲ.

ಕವಿ ಕೃತಿಯ ಬಗ್ಗೆ ಬೇರೆಡೆ ಮಾಹಿತಿ ಇವೆಯೆ ? : ಹೌದು. cf. ಸಾಹಿತ್ಯ ಚರಿತ್ರೆ.

ವಸ್ತು—ವಿಷಯ (ಸಂಕ್ಷಿಪ್ತವಾಗಿ) : ದೇವೀ ಭಾಗವತ, ಸಪ್ತಶತೀ (ಸಂಸ್ಕೃತ) ಗ್ರಂಥಗಳಲ್ಲಿರುವ ದೇವೀಮಹಾತ್ಮೆಯ ಕನ್ನಡ ರೂಪಾಂತರ. (ರಕ್ತಬೀಜಾಸುರ ಸಂಹಾರ ಮತ್ತು ಮಾರ್ಕಂಡೇಯ ಚರಿತ)

ವಿಶೇಷ ವಿಚಾರ : *

ಶ್ರೀ ರಮಣಿ ವಲ್ಲಭನೆ ವಿಮಲಸ
ರೋರುಹಾಸನ ಪಿತನೆ ಸನಕನ
ನಾರದಾದಿ ಶುಕಾಘಪೂಜಿತ ಸರ್ವಗುಣ ನಿಲಯಾ ।
ಚಾರುತರಮಣಿ . . . . ಕೇ
ಯೂರಶೋಭಿತ ಭಜಕ ಜನದಾ
ಧಾರ ಬೋಬುರ ರಘುವರ ಸಲಹುಮೊಜಗವಾ ॥

* * *

ಇಳೆಯ ಕರ್ಣಾಟಕಮಹಾಕೃತಿ । ಗಳಿಗೆ ಗುರುವೆಂತೆಂಬ ಬಿರಿದನು
ತಳೆದುಥಾರಕಕುಕ್ಕಿ ಕುಮಾರವ್ಯಾಸ ವಿವರಿಸಿದಾ ।
ಬಳಿವಿಡಿದು ಶ್ರೀರಾಮ ಚರಿತವ । ಬರಶಿದುಚಯ ಕವೀಂದ್ರರಿಗೆ ಮನ
ವಲಿದು ಮಣಿದಂಬಿಕಾ ವಿಜಯುವನು ವಿರಚಿಸುವೆ ॥ ೧೨ ॥
ವರಸುಂಶಉನಕ ಗೋತ್ರದಾರ್ಯಾ । ಶ್ವರಮನಿರ್ಮಲ ಕುಮೆುನಿಪ್ಪಣ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವರಕುಮಾರ ರಂಗನರ್ಭಕ ಸುಗುಣ ಮಾನವನಾ ।
ತನುಜ ಚಿತ್ತೈತನುಜ ಗುಣ ಘನ । ಧರೆಯು ಕರುಣಿಕ ರಂಗಧಾಮನ
ತರಳ ಬೊಬ್ಬರ ರಂಗವಿರಚಿತ ಮಂಬಿಕಾ ವಿಜಯಾ ॥ ೧೯ ॥
ಹೀಗೆ ೧೯ ಪದ್ಯಗಳಿಲ್ಲಿರುವ ಪೀಠಿಕಾಸಂಧಿ ೨ನೇ ಆಲೇಖದಲ್ಲಿ ಮುಗಿದಿದೆ.
ಬಳಿಕ ಪಲ್ಲ ॥
ವರ ಮುನೀಶ್ವರ ಮನದೊಳಗಜಾ
ಪರನ ಮೂರ್ತಿಯ ಕಂಡು ಹರುಷೋ
ತ್ಕರದ ಸುಖಮಯನಾಗಿ ಪೊಂಪುಳಿಯೋದನಡಿಗಡಿಗೆ
ಪದ । ಆದಿಯಲಿ ಋಷಿಗಣದ ಮಧ್ಯದಿ
ವೇದ ಸಾರ ಪುರಾಣ ಧರ್ಮವ
ನೋದಿ ಕವಿಸಂಕನೂ ವಿವೇಕದಿ ಪೇಳಲಿದ ಕೇಳ್ದು ।
ಆದಿಶಕ್ತಿಯು ರಕ್ತಬೀಜನ
ಪ್ಪೊದು ಕೆಡಹಿದ ಮಹಿಮೆಸಾಗರ
ನಾದಿ ಮಾರ್ತಾಂಡ ಪ್ರಬಂಧಂಗಳನು ಪೇಳಿವುಗೆ ॥
ಕೊನೆಯಲ್ಲಿ—
ಧರೆಯು ಬಾಗಿತು ಗಗನ ತೂಗಿತು । ಶರಧಿ ಕಲಕಿತು ಕೂರ್ಮನಳುಕಿದ
ಗಿರಿಗಳೊಡದವು ಪಾರಿಸಿಡಿದವು ವ್ಯೋಮದುಡುನಿವಹಾ ।
ಮೆರವಣಿಗೆಯುರವಣಿಸೆ ರಿಪುಗಳ । ಬೆರಬೆರಸಿ ಹರಿಹರಿಸಿ ನಾಲ್ದೆಸೆ
ವರಿಗಣವಜುರು ನೆಣವ ಮಾಡಿದರರದು ಶಿರವರಿದೂ ॥
ಸಮಾಪ್ತಿ ವಾಕ್ಯವಿಲ್ಲ.
ಇವನ ಶೈಲಿಗೊಂದು ಉದಾ—
(ಜಲಕ್ರೀಡೆ)
ಮುಳುಗಿದವು ಮತ್ಸ್ಯಗಳು ಕಂಗಳ
ಹೊಳಹ ಕಾಣುತ ಮನದಿಲಜ್ಜಿಸಿ
ಜಲಜ ಕಂಪಿಸುತಿರ್ದುವಾಸ್ಯಕೆ ಸೋಲ್ತು ಭೀತಿಯಲಿ ।
ತೆಳುವಸುರ ತಿವಳಿಯ ಸಿರೀಕ್ಷಿಸಿ
ತೊಲಗಿ ಪಿಮ್ಮೆಟ್ಟಿದುವು ಕಿರುದೆರೆ
ಕೊಳನೊಳಗೆ ಖಚರಿಯರು ಸಂದಣಿಸಲ್ಕೆ ನಿಮಿಷದಲಿ ॥

K 9 : ಕೌಶಿಕರಾಮಾಯಣ

ಕವಿಯ ಹೆಸರು / ಸ್ಥಳ : ಬತ್ತಲೇಶ್ವರ
ಭಾಷೆ : ಕನ್ನಡ ಲಿಪಿ : ಕನ್ನಡ ಗಾತ್ರ ಅಂ. ೨೦ × ೨·೫
೧ ರಿಂದ ೧೫೨ ಆಲೇಖಗಳು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಸ್ತಪ್ರತಿಯ ಸದ್ಯ ಸ್ಥಿತಿ (ತ್ರುಟಿತ, ಅಪೂರ್ಣ ಇ.) : ಚೆನ್ನಾಗಿದೆ, ಸಂಪೂರ್ಣವಿದೆ.
ಆರಂಭದ ಸಾಲುಗಳು : ಶ್ರೀಗಣಾಧಿಪತಯೇನಮಃ : ಶಾರದಾ ಗುರುಭ್ಯೋ ನಮಃ ಶುಭಮಸ್ತು, ನಿರ್ವಿಘ್ನಮಸ್ತು ನಿತ್ಯಮಾಂಗಲ್ಯಮಸ್ತು ಕಉಶಿಕ ರಾಮಾಯಣ ಬರಯುವುದಕ್ಕೆ ಶುಭಮಸ್ತು.
ಕೊನೆಯುಸಾಲುಗಳು : *

ಭೂಮಿಪತಿ ದಶರಥನ ಬಸುರಲಿ
ರಾಮಲಕ್ಷ್ಮಣ ಭರತಶತ್ರುಹ
ನಾಮದಲಿ ಜನಿಸಿದರು ನರಹರಿಯುಮರಪತಿನಲಿಯೆ॥
ಬಾಲ ಶಿಮಂಕರ ಖಂಡಮಂಡಿತ–ಇ.

ಕವಿ, ಕೃತಿಯ ಕಾಲ ವಿಚಾರ (ಆಧಾರದೊಂದಿಗೆ) : ಪ್ರಕಟಿತ.
ಛಂದಸ್ಸಿನ ವಿಚಾರ (ಪದ್ಯವೆ, ಗದ್ಯವೆ ? ವೃತ್ತ ಯಾವುದು ?): ಭಾಮಿನಿಷಟ್ಪದಿ.
ಈ ಮೊದಲು ಅಚ್ಚಾಗಿರಬಹುದೆ ?: ಹೌದು.
ಕವಿಕೃತಿಯ ಬಗ್ಗೆ ಬೇರೆಡೆ ಮಾಹಿತಿ ಇದೆಯೆ ? : ಹೌದು.
ವಸ್ತು—ವಿಷಯ (ಸಂಕ್ಷಿಪ್ತವಾಗಿ) : ರಾಮಾಯಣದ ಕತೆ.
ವಿಶೇಷ ವಿಚಾರ : *

ಕೊನೆಗೆ ೧೫೨ ನೇ ಅಲೇಖದಲ್ಲಿ
ಕಾಮಹರ ಕಮಲಜ ಸುರೇಂದ್ರ । ಸ್ತೋಮವಂದಿತನಾಮಭರತ
ಕ್ಷೇಮಕಾರಣ ಮೂರ್ತಿ ಸಲಹೋದೆಮನನವರತಾ ॥

ರಾಮಚಂದ್ರಾಯನಮಃ :

ವ್ಯೆಯಸಂವತ್ಸರ ಆಷಾಢ ಬಹುಳ ೧೦ ಯು ಸೋಮವಾರದಲ್ಲಿ ಬರದು ಮುಗಿಸಿದ ಕೌಶಿಕರಾಮಾಯಣ ಪುಸ್ತಕಕ್ಕೆ ಆಚಂದ್ರಾರ್ಕಮಸ್ತು । ತಪ್ಪುಂಬರದನೆಂದು ಬಯ್ಯ ಲಾಗದು ಬಲ್ಲಾದವರು ವಿದ್ಯಾಸಾಲಿಗಳು ವೊದಿ ತಪ್ಪು ವಪ್ಪು ಮೇತಯ್ಯೆತದಾತ ಯಿಳಿಯೇನು ತಪ್ಪಿದರು ತಿದ್ದಿಕೊಳ್ಳುವದು. ಪರಾಕ್ರಮ ವಿದ್ಯಶಾಲಿಗಳಿಗೆ ಸಾವಿರ ನಮಸ್ಕಾರ.

ಈ ಪುಸ್ತಕ ಬರೆದಾತ ಉಡ್ಪಿತಾಲೂಕು ಹನೆಹಳ್ಳಿ ಮಾಗಣೆ ಕಂನ್ಯಾಣ ಗ್ರಾಮದ ಲ್ಲಿರುವ ಕಾಳಿಂಗ ನಾವುಡರ ಮಗ ನರಸಿಂಹ ನಾವುಡನು ಬರೆದು ಮುಗಿಸಿದಂತ ಪುಸ್ತಕ ಕೌಶಿಕರಾಮಾಯಣ ಪುಸ್ತಕಕ್ಕೆ ಆಚಂದ್ರಾರ್ಕಮಸ್ತು.

K 10 : ದೇವೀಮಹಾತ್ಮೆ

ಕವಿಯ ಹೆಸರು / ಸ್ಥಳ : ತಿಳಿದಿಲ್ಲ
ಭಾಷೆ : ಕನ್ನಡ ಲಿಪಿ : ಕನ್ನಡ ಗಾತ್ರ ಅಂ. ೨೦ × ೨.೫
೧–೨೫ ಆಲೇಖಗಳು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಸ್ತಪ್ರತಿಯ ಸದ್ಯ ಸ್ಥಿತಿ : (ತ್ರುಟಿತ, ಅಪೂರ್ಣ ಇ.) ಚೆನ್ನಾಗಿದೆ, ಅಪೂರ್ಣ.
ಆರಂಭದ ಸಾಲುಗಳು : ದೇವೀಮಹಾತ್ಮೆ ಬರಲುದಕ್ಕೆ ಶುಭಮಸ್ತು
ಗಣಾಧಿಪತಯೇ ನಮಃ (ಇತ್ಯಾದಿ ಸಾಂಪ್ರದಾಯಿಕ ನಮನಗಳು)
ಶ್ರೀರಮಣ ಜಯ ವಾಣಿಪತಿಜಯ
ನಾರಿ ಗೌರೀವರನೆ ಜಯತು ಮು
ರಾರಿ ಕಮಲಜಪರಮಶಿವ ಹರ್ಯಜತ್ರಿಣೇತ್ರಜಯ ।
ಚಾರು ಗರುಡ ಮರಾಳ ವೃಷಭನ
ನೇರ್‍ವ ಮೋಕ್ಷೀ ಚಿಂದುಕಾಂತಿಯ
ದಾರಚಕ್ರ ಕಮಂಡಲಾಯುಧರಿಂಗೆ ಜಯಜಯತು ॥
ಛಂದಸ್ಸಿನ ವಿಚಾರ (ಪದ್ಯವೆ, ಗದ್ಯವೆ ? ವೃತ್ತ ಯಾವುದು ?) : ಭಾಮಿನಿಷಟ್ಪದಿ.
ಈ ಮೊದಲು ಅಚ್ಚಾಗಿರಬಹುದೆ ?: ತಿಳಿದಿಲ್ಲ.
ಕವಿ ಕೃತಿಯ ಬಗ್ಗೆ ಬೇರೆಡೆ ಮಾಹಿತಿ ಇದೆಯೇ ?: ತಿಳಿದಿಲ್ಲ.
ವಸ್ತು—ವಿಷಯ (ಸಂಕ್ಷಿಪ್ತವಾಗಿ) : ದೇವೀಭಾಗವತ, ಸಪ್ತಶತೀ ಕತೆಗಳ ಸಾರಾಂಶ
ವಿರುವ ಕನ್ನಡ ಕಾವ್ಯ.
ವಿಶೇಷ ವಿಚಾರ :
ಕೊನೆಯ ಸಾಲುಗಳು :
ಪರಮ ಮಂಗಳ ರೂಪೆಯಂಬಿಕೆ
ಯುರುಕೃಪಾಮೃತದಿಂದೆ ಪಡದರು
ಸುರಥ ಭೂಪ, ಸಮಾಧಿ ವೈಶ್ಯರು ಸಕಲಕಾಮಿತವಾ ।
ಪರಮ ಪುಣ್ಯವ್ಯೋಮಲೋಕದ
ನರರ ಸಂಸೃತಿ ಬಂಧನಾಶನ
ಹರಿಹರಾರ್ಚಿತೆಯಮಲ ಚರಿತವಿದೆಂದನಾ ಮುನಿಪ ॥
ಪರಮವಿದ್ಯೆಯನಖಿಳ ವಿಪ್ರರು । ಧರಣಿಪಾಲಕರಖಿಳ ರಾಜ್ಯವ
ನಿರದೆ ಪಡವರು ವೈಶ್ಯರುಂ ನುತಧನಸಮೃದ್ಧಿಯನು ।
ಸರಸಿಜಾಕ್ಷಿಯ ಲೋಕಪಾವನ । ಚರಿತವಿದನಾಲಿಸುವ ಶೂದ್ರರು
ನಿರುಪಮಾನಂದವನು ಪಡೆವರು ಭಕ್ತಿಯೋಗದಲಿ ॥ ೪೯ ॥
ಪರಮ ಮಂಗಳ ಲೋಕಪಾವನ । ಕರದುರಂತ ಭವಾಬ್ಧಿತಾರಕ
ಸುರಮುನೀಶ್ವರ ಸಿದ್ಧ ಸಂತತ ಮುಕ್ತಿ ಪಥಿಕರಿಗೆ ।
ಶರಣ ಕೇಳುವ ಪೇಳ್ದ ನರರಿಗೆ । ಕರುಣಿಸುಗೆ ಕಾಮಿಸಿದ ವರವನು
ಚರಿತವಿದು ಪಾವನಕೆ ಪಾವನ ಮಂಗಳಾತ್ಮಕಿಯಾ ॥ ೫೦ ॥
ಸಂಧಿ ೨೯ ಪದ ೪೬೦ ಕ್ಕಂ ಮಂಗಳ.
ದೇಯೆನಲು ದುರಿತಹೀನಪವಿತ್ರಳು
ವೀಯೆನಲು ವಿದ್ಯೆಗಳು ಸೇರಂಗು
ಮಾಯೆನಲು ಮಹಲಕ್ಷ್ಮಿ ತನಯ ತತ್ತ್ವದಿಂಬಹುದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಾಯೆನಲು ಹರಿಹರಕಟಾಕ್ಷಲು
ಮೇಯೆನಲು ಪರಮಾತ್ಮದರುಷನ
ಪ್ರೀಯದಿಂ ದೇವೀಮಹಾತ್ಮೆಯು ನೆಂದವರಿಗಹುದು.
ಯಾದೃಶಂ ಪುಸ್ತಕಂ ದೃಷ್ಟ್ವಾ....ಮಮದೋಷೋ ನ ವಿದ್ಯತೆ ॥
ತಪ್ಪಂ ಬರೆದಾತಂ ಕಡುಜಡ
ನಪ್ಪಂ ತಪ್ಪಂ ಬರೆದನೆಂದು ಬಯ್ಯಲು ಬೇಡ
ತಪ್ಪಕ್ಕಂ ಶುದ್ಧಮುಕ್ಕಂ
ಯಿಪ್ಪುತಿಹ ಪ್ರತಿಸಮಾನಂ ಗಂಡು ಬರೆದೆಂ
ಪ್ರತಿಶುದ್ಧಮೆನಲ್ಕೆ ಕಾವ್ಯದೋಜೆಯು ನರಿಯೆಂ
ಪ್ರತಿಯೆಂತು ಟಿಂತುಟಂ ಬರೆದೆಂ
ಮತಿವಂತರು ತಿದ್ದಿಕೊಳ್ಗಿ ಬೆಯ್ಯಲು ಬೇಡಾ
ಮಂಗಳ ಮಹಾ ಶ್ರೀ (ಕಲ್ಯಾಣ ಕಾಳಿಂಗ ನಾವುಡ)
(ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾಹನ ಶಕವರ್ಷ ೧೮೧೧ ನೇ) ಸರ್ವಧಾರಿ ಯಲ್ಲಿ ಬರದ್ದು)
ಈ ದೇವೀಮಹಾತ್ಮೆಯು ಚಿದಾನಂದಾವಧೂತನದಿರಬಹುದೇ ವಿಚಾರಣೀಯ.

K 11: ಮಹಾಭಾರತ (ಆಸ್ತೀಕಪರ್ವ)

ಕವಿಯ ಹೆಸರು/ಸ್ಥಳ : ಕುಮಾರವ್ಯಾಸ
ಭಾಷೆ : ಕನ್ನಡ ಲಿಪಿ : ಕನ್ನಡ ಗಾತ್ರ ಅಂ. ೨೦.೫ × ೨.೨೫
೧ ರಿಂದ ೪೮ ಆಲೇಖಗಳು
ಹಸ್ತಪ್ರತಿಯ ಸದ್ಯ ಸ್ಥಿತಿ : (ತ್ರುಟಿತ, ಅಪೂರ್ಣ ಇ.) ಸಾಮಾನ್ಯವಾಗಿದೆ. ಆಸ್ತಿಕ ಪರ್ವ ಪೂರ್ಣವಿದೆ
ಆರಂಭದ ಸಾಲುಗಳು : ಶ್ರೀವನಿತೆಯರಸನೆ.
ಛಂದಸ್ಸಿನ ವಿಚಾರ (ಪದ್ಯವೆ, ಗದ್ಯವೆ ? ವೃತ್ತ ಯಾವುದು ?) : ಭಾಮಿನಿಷಟ್ಪದಿ.
ಈ ಮೊದಲು ಅಚ್ಚಾಗಿರಬಹುದೆ ?: ಹೌದು.
ಕವಿ ಕೃತಿಯ ಬಗ್ಗೆ ಬೇರೆಡೆ ಮಾಹಿತಿ ಇದೆಯೆ ? : ಹೌದು.
ವಸ್ತು-ವಿಷಯ (ಸಂಕ್ಷಿಪ್ತವಾಗಿ) : ಮಹಾಭಾರತದ ಕತೆ.
ವಿಶೇಷ ವಿಚಾರ : ಏನೂ ಇಲ್ಲ.

K 12: ಆದಿತ್ಯಪುರಾಣ (ಸರ್ಪಾಧ್ವರ) + ಶಿವಭಿಕ್ಷಾಟನೆ

ಕವಿಯ ಹೆಸರು/ಸ್ಥಳ : ತಿಳಿದಿಲ್ಲ
ಭಾಷೆ : ಕನ್ನಡ ಲಿಪಿ : ಕನ್ನಡ ಗಾತ್ರ ಅಂ. ೧೯.೭೫ × ೨.೨೫
೧—೧೨೨+೧—೯ ಆಲೇಖಗಳು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹಸ್ತಪ್ರತಿಯು ಸದ್ಯ ಸ್ಥಿತಿ : ಚೆನ್ನಾಗಿದೆ, ಪೂರ್ಣ.
ಆರಂಭದ ಸಾಲುಗಳು : ಗಣಪತಯೇ ನಮ : ಇತ್ಯಾದಿ.
ಭಾ.ಷ. 1 ಶಿವಕಥಾಮೃತವೆಂಬ ಶಿವಕಾ
ವ್ಯವನು (ನೇ)ವಂದೆ ಮದಲು ವಿಸ್ತರಿ
ಸುವೆನು ನಾಂದೀ ಸಂಧಿಯನು ಶಿವಮುಖ್ಯ ಸಂಸ್ತುತಿಯಾ
ಕೊನೆಯ ಸಾಲುಗಳು :
